₹ 5/-

# ನೇಸರು

## ತಿಂಗಳೋಲೆ

PAGES 24

December 2017 | Nesaru Tingalole | Vol. XXXV - 12




ಮೈಸೂರಿನಲ್ಲಿ ನಡೆದ ೮೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಲ್ಪಟ್ಟ
ಡಾ. ಮಂಜುನಾಥ್ ಅವರಿಗೆ ಹಾರ್ದಿಕ ಅಭಿನಂದನೆಗಳು

ಮೈಸೂರು ಅಸೋಸಿಯೇಷನ್ ಮುಂಬೈ
THE MYSORE ASSOCIATION, BOMBAY
393, Bhau Daji Road, Matunga, Mumbai - 400 019. | Tel.: 2402 4647, 2403 7065
Email : mysoreassociation.mumbai@gmail.com

ಮುಂಬರುವ ಕಾರ್ಯಕ್ರಮಗಳು

# ಅಪೂರ್ವ ಕರ್ನಾಟಕ ಜಾನಪದ ನೃತ್ಯಗಳು

**ತರಳಬಾಳು ಮಠದಲ್ಲಿ ತಯಾರಾದ 250 ಬಾಲಕರು ಕರ್ನಾಟಕದಿಂದ ಮುಂಬೈಗೆ ತಮ್ಮ ನೃತ್ಯಗಳನ್ನು ತೋರಿಸಲು ಬರುತ್ತಿದ್ದಾರೆ**




**ಡಿಸೆಂಬರ್ 17, 2017 ರಂದು ಸಂಜೆ 5.00 ಗಂಟೆಗೆ**

**ರಾಷ್ಟ್ರೀಯ ಕನ್ನಡ ಶಿಕ್ಷಣ ಶಾಲೆಯ ಬಯಲು ರಂಗ ಮಂಟಪದಲ್ಲಿ**

**ಮಾನ್ಯ ಶ್ರೀ ಸಿದ್ದರಾಮಯ್ಯನವರು**

(ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯ)

ವಿಶೇಷ ಅತಿಥಿಯಾಗಿ ಅಂದು ಆಗಮಿಸಲಿದ್ದಾರೆ.

ಈ ಅಪೂರ್ವ ಅವಕಾಶವನ್ನು ತಾವು ಕಳೆದುಕೊಳ್ಳದೆ ಬಂದು ಕರ್ನಾಟಕದ ಕಲೆಯನ್ನು ನೋಡಿ ಆನಂದಿಸಬೇಕು.

**ಎಲ್ಲರಿಗೂ ಸುಸ್ವಾಗತ**

**ಮೈಸೂರು ಅಸೋಸಿಯೇಷನ್ ಮುಂಬೈ, ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆ, ವಡಾಲ, ಕರ್ನಾಟಕ ಸಂಘ ಮುಂಬೈ**

**ಡಿಸೆಂಬರ್ 31ಕ್ಕೆ ಮೈಸೂರು ಅಸೋಸಿಯೇಷನ್‌ನಲ್ಲಿ**

**ಹೊಸ ವರ್ಷದ ಆಚರಣೆ – 2018**


**ಸಂಜೆ 7ರಿಂದ**

**Contributory Dinner Rs. 100/-**

**ಸದಸ್ಯರೆಲ್ಲರಿಗೂ ಆದರದ ಸ್ವಾಗತ**

ನೇಸರು ಓದುಗರಿಗೆ

ಮತ್ತು



ಸದಸ್ಯರೆಲ್ಲರಿಗೆ ಕ್ರಿಸ್‌ಮಸ್ ಹಬ್ಬ

ಹಾಗೂ

ಹೊಸ ವರ್ಷದ

ಹಾರ್ದಿಕ ಶುಭಾಶಯಗಳು

THE MYSORE ASSOCIATION, MUMBAI

**ಮೈಸೂರು ಅಸೋಸಿಯೇಶನ್, ಮುಂಬಯಿ**

ಪ್ರಸ್ತುತ ಪಡಿಸುವ

ರವಿವಾರ, ದಿನಾಂಕ **17.12.2017**ರ ಬೆಳಿಗ್ಗೆ 11.00ಕ್ಕೆ



ಈ–ಟಿವಿಯ 'ಎದೆ ತುಂಬಿ ಹಾಡುವೆನು'

ಕಾರ್ಯಕ್ರಮದ ಪ್ರಶಸ್ತಿ ವಿಜೇತೆ

**ವಿದೂಷಿ ಪಾವನಿ ಕಾಶೀನಾಥ್**

**ಮತ್ತು**

**ತಂಡದವರಿಂದ**

ಸ್ಥಳ : ಮೈಸೂರು ಅಸೋಸಿಯೇಶನ್ ಸಭಾಗೃಹ,
393, ಭಾವು ದಾಜಿ ರಸ್ತೆ, ಮಾತುಂಗ (ಪೂ),
ಮುಂಬಯಿ-400 019.

ದೂರವಾಣಿ : 24024647 / 24037065

ವಿ.ಸೂ : ಕಾರ್ಯಕ್ರಮದ ನಂತರ ಪ್ರೀತಿ ಭೋಜನ.

**ಎಲ್ಲರಿಗೂ ಆತ್ಮೀಯ ಸ್ವಾಗತ.**

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065

Email :
mysoreassociation.mumbai@gmail.com

Website :
www.mysoreassociation.in

*ಸಂಪಾದಕೀಯ*

# ನೇಸರು

## ತಿಂಗಳೋಲೆ

**ಸಂಪುಟ 35** **ಡಿಸೆಂಬರ್ 2017** **ಸಂಚಿಕೆ 12**

ಕನ್ನಡ ನಾಡು ಅತಿ ಪ್ರಾಚೀನವಾದುದು, ಎಂದು ಎಲ್ಲರೂ ತಿಳಿದ ವಿಷಯ. ಕನ್ನಡ ಎಂಬ ಪದವೇ ಕರ್‌ನಡ– ಕರುನಾಡು ಎಂಬ ಪದದಿಂದ ಹುಟ್ಟಿದ್ದು. ನುಡಿಯಂತೂ 2000 ವರ್ಷಗಳಿಗಿಂತ ಹಳೆಯದಾಗಿದ್ದು, ಈಗ ದೇಶದ ಒಂದು ಶಾಸ್ತ್ರೀಯ ಭಾಷೆಯೆಂದೂ ಗುರುತಿಸಲಾಗಿದೆ.

ಕವಿರಾಜಮಾರ್ಗ, 7–8 ನೆಯ ಶತಮಾನದ್ದಾದರೂ, ಅದರಲ್ಲಿಯೇ ಹಿಂದಿನ ಕವಿಗಳ ಉಲ್ಲೇಖವಿದ್ದು, ಕಾವ್ಯ ಬರೆಯುವ ಪರಿ ಬಗೆಗಳನ್ನು ಚರ್ಚಿಸಲಾಗಿದೆ. ಇಂತಹ ನುಡಿ, ಇಂದು ಕನ್ನಡ ನಾಡಿನಲ್ಲಿಯೇ ಉಳಿಯುವುದು ಕಠಿಣವಾಗಿದೆ.

ನಿನ್ನೆ ತಾನೇ, ಮಗುವೊಂದು, ಶಿಶುನಾಳ ಶರೀಫರ "ಕೋಡಗನ ಕೋಳಿ ನುಂಗಿತ್ತಾ" ಎನ್ನುವ ಪದವನ್ನು "ಕನ್ನಡಾನ ಇಂಗ್ಲೀಷ್ ನುಂಗಿತ್ತಾ" ಎಂದು ಹಾಡುತ್ತಿತ್ತು !!! ಯಾವ ಸರ್ಕಾರವೂ ನಮ್ಮ ನುಡಿ–ನಡೆವಳಿಕೆಗಳನ್ನು ಉಳಿಸಿಕೊಳ್ಳುವುದಕ್ಕೆ ಶಕ್ತವಾಗಿರುವುದಿಲ್ಲ. ಅದನ್ನು ನಾಡಿನ ಮಂದಿಯೇ ಉಳಿಸಿಕೊಳ್ಳಬೇಕಾಗುತ್ತದೆ. ಕನ್ನಡವಿಲ್ಲದಿದ್ದರೆ, ನಾಡಿಗೆ "ಕರ್ನಾಟಕ" ಎಂಬ ಹೆಸರೂ ಸಲ್ಲುವುದಿಲ್ಲ. "ಎರಡನೆಯ ಇಂಗ್ಲೆಂಡು" ಎಂದು ಹೆಸರೋ, ಇಲ್ಲ "ಇಂಗು ನಾಡು" ಎಂದೂ ಹೆಸರಿಡಬೇಕಾದೀತು ಸರ್ಕಾರ. ಕನ್ನಡವನ್ನು ಕಡ್ಡಾಯ ಮಾಡಿದಾಗ, ಕನ್ನಡಿಗರೇ ತಾವೇ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿ ತಾಕಲಾಡಿ, ಅದನ್ನು ಹೊರಗೆ ಮಾಡಿದ್ದು ಗೊತ್ತಿದೆ. ತಮಿಳುನಾಡು ಮೊದಲಿಂದಲೂ ತಮಿಳನ್ನು ಕಡ್ಡಾಯಗೊಳಿಸಿದೆ. ಬಂಗಾಳದಲ್ಲಿ ಕೂಡ 2017 ರಿಂದ ಬಂಗಾಲಿ ಕಡ್ಡಾಯವಾಗಿದ್ದು. ಮಹಾರಾಷ್ಟ್ರದಲ್ಲಿ , 2010 ರಿಂದ ಮರಾಠೀ ಕಡ್ಡಾಯವಾಗಿದೆ. ಆದರೆ ಕನ್ನಡ ಬೇಡವೆಂದು, ತಮ್ಮ ಮಕ್ಕಳನ್ನು, CBSE, ICSE, IB ಶಾಲೆಗಳಿಗೆ ಸೇರಿಸುವ ಪರಿಪಾಠ ಕನ್ನಡದ ತಾಯಿತಂದೆಯರದ್ದೇ ತಾನೇ.

ಇನ್ನು ಕನ್ನಡದ ಸಾಹಿತಿಗಳ ವಿಷಯ ತಾವೇ ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮಕ್ಕೆ ಹಾಕಿ, ಬೇರೆಯವರನ್ನು ಕನ್ನಡ ಕಲಿಯಬೇಕೆಂದು ಒತ್ತಾಯಿಸುವುದೇ ಇವರ ಲಕ್ಷಣ. ಈ ನಡುವೆಯಂತೂ ಸಾಹಿತ್ಯ ಬಿಟ್ಟು ರಾಜಕೀಯ ಬಣಗಳಲ್ಲಿ ಸೇರಿರುವ ಸಾಹಿತಿಗಳೇ ಹೆಚ್ಚು. ಅಚ್ಚಾದ ಪುಸ್ತಕಗಳನ್ನು ಓದುವ ಮಂದಿಯೂ ಕಡಿಮೆಯಾಗಿದ್ದಾರೆ.

ಈ ಎಲ್ಲಾ ಕಾರಣಗಳಿಂದ, ಇನ್ನು ಮುಂದೆ ಕನ್ನಡದ ಉಳಿವು, ಹೆಚ್ಚಾಗಿ, ಕೇಳುವ, ಅಂತೆಯೇ, ಮುಗಿಲ ಬಲೆಯನ್ನೇ, ಅನುಸರಿಸಬೇಕಾಗಿದೆ.

ಪ್ರತಿ ಮನೆಯೂ ಹಿಂದಿನಂತೆ, ಒಂದು ಶಾಲೆಯಾಗಬೇಕಾಗಿದೆ. "ಹಚ್ಚೇವು ಕನ್ನಡ ದೀಪ" ಎನ್ನುವ ಹಾಡು ಗೆಲ್ಲಬೇಕಾದರೆ, ಪ್ರತಿ ತಂದೆ ತಾಯಿಯರೂ ಕೂಡ, ಮಕ್ಕಳ ಮನಸ್ಸಿನಲ್ಲಿ ಒಂದು ಕನ್ನಡದ ದೀಪ ಇಂದು ಹಚ್ಚಬೇಕಾಗಿದೆ. ಇದು ಶಾಲೆಯ ಕೆಲಸವಲ್ಲ. ಈ ಹೊಣೆಗಾರಿಕೆ ತಂದೆತಾಯಿಯರಿಗೆ ಬರುವ ವರೆಗೆ, ಕನ್ನಡದ ದೀಪ ಹತ್ತುವುದೇ ಇಲ್ಲ.

ತಂದೆ–ತಾಯಿ ಆಗುವುದಕ್ಕೂ ಒಂದು ಯೋಗ್ಯತೆ ಬೇಕು ತಾನೇ.

✍ **ಡಾ. ಮಂಜುನಾಥ್**

## ಇನ್ನು ಎಲ್ಲಿಗೋಟ –4

# ಬೌದ್ಧ ಸಾಮ್ರಾಜ್ಯ ಭೂತಾನ್



✍ ಉಮಾ ರಾವ್

ನೇಪಾಳದಲ್ಲಿರುವಂತೆ ಇಲ್ಲಿ ಕರ್ಫ್ಯೂನೋಗಳಿಲ್ಲ. ಥೀಮ್ ಪಾರ್ಕ್‌ಗಳಿಲ್ಲ. ಥೈಲ್ಯಾಂಡಿನಲ್ಲಿರುವಂತೆ ಪಂಜರಗಳಲ್ಲಿ ಪ್ರದರ್ಶಿತಗೊಳ್ಳುವ ಬಾಲವೇಶ್ಯೆಯರಿಲ್ಲ. ಕ್ಯಾಲ್ಕುಲೇಟರ್‌ಗಳನ್ನು ಮುಖಕ್ಕೆ ಹಿಡಿದೇ ಸರಕುಗಳ ಬೆಲೆ ಬಗ್ಗೆ ಚೌಕಾಸಿ ಮಾಡುವ ಚಾಲಾಕಿ ಹುಡುಗಿಯರಿಲ್ಲ. ಸಿಂಗಪುರದಲ್ಲಿರುವಂತೆ ಆಸ್ಪತ್ರೆಯಿಂದ ಸ್ವಚ್ಛತೆಯ ನಡುವೆಯೂ ಮಿಂಚುವ ಮ್ಯಾಕ್ಡೊನಾಲ್ಡ್ಸ್, ಪೀಝಾ ಹಟ್‌ಗಳ ನಿಯಾನ್ ಸೈನುಗಳಿಲ್ಲ. ಸಿಕ್ಕಿಂನಲ್ಲಿರುವಂತೆ ಮಗ್ಗಗಳಲ್ಲಿ ಬಣ್ಣ ಬಣ್ಣದ ಶಾಲುಗಳನ್ನು ನೇಯುತ್ತಾ ದಶಕಗಳಿಂದ ಮನೆಗೆ ಮರಳಲು ಕಾಯುತ್ತಿರುವ ನಿರಿಗೆ ಮುಖದ ಟಿಬೆಟನ್ ಮುದುಕಿಯರಿಲ್ಲ. ಲಡಾಖ್‌ನಲ್ಲಿರುವಂತೆ ಮಾರುತಿ ಜಿಪ್ಸಿಗಳಲ್ಲಿ ಕಡಿದಾದ ಪರ್ವತದ ತಿರುವುಗಳನ್ನು ಸುತ್ತಿ ಸುತ್ತಿ ಹತ್ತುತ್ತಿರುವಾಗ ಪ್ರತಿ ಮೈಲುಗಲ್ಲುಗಳ ಮೇಲೂ ದೇಶಕ್ಕಾಗಿ ಕಾದಾಡಿ ಹತರಾದ ಯುವ ಯೋಧರ ಹೆಸರುಗಳಿಲ್ಲ. ಇದು ಭೂತಾನ್.

ಭಾರತ, ನೇಪಾಳ, ಚೈನಾದಂತೆ ಭೂತಾನ್ ಯಾವ ನೆರೆಹೊರೆಯ ದೇಶದಂತೆಯೂ ಅಲ್ಲ. ಎಲ್ಲೆಲ್ಲೂ ಆಕಾಶ ಮುಟ್ಟಲು ಹವಣಿಸುತ್ತಿರುವ ಬೃಹತ್ ಹಿಮಪರ್ವತಗಳು. ದಟ್ಟ ಪೈನ್ ಗಿಡಗಳ ತೋಪುಗಳು. ಇದುವರೆಗೂ ಪ್ರಪಂಚದ ಏಕೈಕ ಬೌದ್ಧ ಸಾಮ್ರಾಜ್ಯವಾಗಿದ್ದುಇದೇ ಪ್ರಜಾಪ್ರಭುತ್ವಕ್ಕೆ ಕಾಲಿಟ್ಟಿರುವ ಸುಂದರದೇಶ. ಸಾವಿರಾರು ವರ್ಷದ ಸಾಂಪ್ರದಾಯಿಕ ಶೈಲಿಯಲ್ಲಿ ಕಟ್ಟಿದ ಬಣ್ಣದ ಚಿತ್ತಾರದ ಮರದ ಚಾವಣಿ ಹೊದ್ದ ಕಟ್ಟಡಗಳು, ಬೃಹತ್ ಝೂಂಗ್‌ಗಳು, ಅದರಲ್ಲಿ ಸರಸರನೆ ಓಡಾಡುತ್ತಿರುವ ಎಣ್ಣೆಗೆಂಪು ಬಣ್ಣದ ಉಡುಪಿನ ಸನ್ಯಾಸಿಗಳು. ಅವರ ಸಾಂಪ್ರಾದಾಯಿಕ ಉಡುಪು ಘೊ. ಕಿರಾ ಧರಿಸಿ ನಗುನಗುತ್ತಾ ಓಡಾಡುವ ಜನ. ಎಲ್ಲದರ ಮೇಲೆ ನವಿರಾದ ಮಂಜಿನ ಮುಸುಕು. ಎತ್ತರದಲ್ಲಿ ಗಾಳಿಯಲ್ಲಿ ಪಟಪಟನೆ ಹಾರುತ್ತಾ ಶಾಂತಿಮಂತ್ರಿಗಳನ್ನು ಪರ್ವತಗಳಾಚೆಗೆ ಪಸರಿಸುತ್ತಲೇ ಇರುವ ಪ್ರಾರ್ಥನಾ ಧ್ವಜಗಳು. ಈ ನೆಲದ ತುಂಬಾ ಭಕ್ತಿ ಇದೆ. ಪ್ರೀತಿಇದೆ. ಪ್ರಕೃತಿಗೆ ಗೌರವವಿದೆ. ಮೂಲೆ ಮೂಲೆಗಳಿಂದ ಬುದ್ಧನ ನುಡಿಗಳು ಮಾರ್ನುಡಿಯುತ್ತಿವೆ. ಪ್ರತಿಯೊಬ್ಬರ ಎದೆಯಲ್ಲಿ ದಂತ ಕಥೆಗಳು ಪಿಸುಗುಟ್ಟುತ್ತಿವೆ. ಇಲ್ಲಿನ ರಾಜ ಮತ್ತು ಅವನ ನಾಲ್ಕು ರಾಣಿಯರ ಕಂಡರೆ ಅಗಾಧ ಪ್ರೇಮವಿದೆ. ಇಲ್ಲಿ ಬಡತನವಿದೆ, ಭಿಕ್ಷುಕರಿಲ್ಲ. ಕೊಲೆ, ಕಳ್ಳತನಗಳಿಲ್ಲ. ಬೇರೆ ಬೇರೆ ದೇಶಗಳಿಂದ ಬರುವ ಯಾತ್ರಿಗಳ ಅಚ್ಚರಿಯಿದೆ, ಕುತೂಹಲವಿದೆ. ದ್ವೇಷ ಅಸೂಯೆಗಳಿಲ್ಲ. ಅವರನ್ನೇ ಬಂಡವಾಳ ಮಾಡಿಕೊಳ್ಳುವ ದುರಾಸೆಯಿಲ್ಲ. ಪೋಲಿಸರು ಕಂಡುಬರುವುದೇ ಇಲ್ಲ.

**ದೋಚುರ್ಲಾದಲ್ಲಿ ಶಾಂತಿಮಂತ್ರಗಳ ಸ್ಪರ್ಶ**

ಕೊಲ್ಕೊತ್ತಾದಿಂದ ನಮ್ಮನ್ನು ಕರೆತಂದ ಡ್ರುಕ್‌ಏರ್ ವಿಮಾನದಲ್ಲಿ ಕುಳಿತು ದಾರಿ ಉದ್ದಕ್ಕೂ ಹೊಂಬೆಳಕಿನಲ್ಲಿ ಎವರೆಸ್ಟ್, ಕಾಂಚನಗಂಗಾ ಮುಂತಾದ ಶಿಖರಗಳನ್ನು ಕಣ್ಣು, ಮನ ತುಂಬಿಕೊಳ್ಳುತ್ತಲೇ ಇಳಿದಿದ್ದು ಪಾರೋದಲ್ಲಿ. ಪ್ರಯಾಣಿಕರಲ್ಲಿ ಹೆಚ್ಚು ಜನ ಶಾಪಿಂಗಿಗಾಗಿ ಬ್ಯಾಂಕಾಕ್‌ಗೆ ಹೋಗಿ ಮರಳುತ್ತಿರುವ ಭೂತಾನೀಯರು. ಮಿಕ್ಕ ಪ್ರವಾಸಿಗಳು ಪಾಶ್ಚಾತ್ಯ ದೇಶದವರು. ಭಾರತದಿಂದ ಬಂದವರು ನಮ್ಮ ಗುಂಪಿನ ನಾಲ್ಕು ಜನ ಅಷ್ಟೇ. ನಾವು ನೋಡಿದ್ದ ಯಾವ ದೇಶದಲ್ಲೂ ಅಷ್ಟೊಂದು ಆದರದಿಂದ ಬರ ಮಾಡಿಕೊಂಡ ಏರ್ಪೋರ್ಟ್ ಸ್ಟಾಫ್ ಕಂಡಿರಲಿಲ್ಲ. ನಾವು ಮೊದಲ ದಿನ ಆಯ್ಕೆ ಮಾಡಿಕೊಂಡಿದ್ದು ದೋಚುರ್ ಲಾ ಮತ್ತು ಪುನಾಖ ನೋಡಿ ಬರಲು. ನಮ್ಮನ್ನು ಅಲ್ಲಿಗೆ ಕರೆದೊಯ್ಯುವ ಟೊಯೆಟಾ ಗಾಡಿ ಬೆಳಗಾಗೆದ್ದು ಹೋಟೆಲ್ ಎದುರು ನಿಂತಿತ್ತು. ಅಂದು ನಮ್ಮಜೊತೆ ಬರಲಿದ್ದ ನೀಮಾ ತನ್ನ ಪರಿಚಯ ಮಾಡಿಕೊಂಡಳು. ತೆಳ್ಳಗೆ, ಬೆಳ್ಳಗಿದ್ದ ನೀಮಾ ಕಂದು ರೇಶಿಮೆ ಕೂದಲಿನ ಚೆಲುವೆ. ತೊಟ್ಟಿದ್ದು ತಿಳಿ ಹಸಿರು ಕೀರ. ಮ್ಯಾಟ್ರಿಕ್‌ವರೆಗೂ ಓದಿದ್ದೀನಿ. ಸ್ವಲ್ಪ ಇಂಗ್ಲೀಷ್, ಹಿಂದಿನೂ ಬರುತ್ತೆ ಎಂದಳು. ಮನೇಲಿ ಯಾರು ಯಾರಿದೀರಾ ಎಂದು ಕೇಳಿದ್ದಕ್ಕೆ ನಾನು ಮತ್ತು ನನ್ನ 3 ವರ್ಷದ ಮಗ, ನನ್ನ ಅಮ್ಮ ಎಂದು ಕುಲುಕುಲು ನಕ್ಕಳು. ಗಂಡ ಏನು ಮಾಡ್ತಾನೆ ಎಂದದ್ದಕ್ಕೆ, ನಾನು ಡಿವೋರ್ಸಿ ಎಂದು ಮುಖ ಚಿಕ್ಕದು ಮಾಡಿಕೊಂಡು ನಾನೇಕೆ ಆ ಪ್ರಶ್ನೆ ಕೇಳಿದೆನೋ ಅನ್ನಿಸುವಂತೆ ಮಾಡಿದಳು. ವ್ಯಾನ್ ಹೊರಟಂತೆ ಬ್ರಯಾನ್ ಆಡಮ್ಸ್‌ನ 'ಸಮರ್‌ಒಫ್ ಸಿಕ್ಸ್ಟಿನೈನ್' ಶುರುವಾಗಿದ್ದು ನಮಗೆ ಅಲ್ಲಿ ನಂಬಲು ಕಷ್ಟವಾದ ವಿಷಯ. ಆದರೆ ಅದರಲ್ಲಿ ಬರುತ್ತಿದ್ದ ಹಾಡು ಮಾತ್ರ ಭೂತನೀಸ್ ಭಾಷೆಯದಾಗಿತ್ತು. ಹೀಗೆ ಅವರು ನಮ್ಮ ಹಿಂದಿ ಸಿನೆಮಾ ಹಾಡುಗಳನ್ನೂ ತಮ್ಮದಾಗಿಸಿಕೊಂಡಿದ್ದರು.

ನೀಮಾ ದಾರಿಯುದ್ದಕ್ಕೂ ಸ್ವಾರಸ್ಯವಾಗಿ ಮಾತಾಡುತ್ತಿದ್ದಳು "ಮೊದಲು ನಮಗೆ ಟೀವೀಲಿ ಬರೀ ಭೂತನೀಸ್ ಪ್ರೋಗ್ರಾಮ್ ಬರೋದು. ಈಗ ಕೇಬಲ್ ಬಂತಲ್ಲಾ, ಹಿಂದೀದೂ ಬರುತ್ತೆ ನಮಗೆ ಕುಸುಮ್, ಸಾಸ್ ಭಿ ಕಭಿ..., ಕೊಇ ಹೈ... ಎಲ್ಲಾ ತುಂಬಾ ಇಷ್ಟ"ಎಂದು ನಮ್ಮ ಪ್ರತಿಕ್ರಿಯೆಗಾಗಿ ಕಾದಳು. ನಾವು ಅವನ್ನು ನೋಡುವುದಿಲ್ಲ ಎಂದು ಹೇಳಿದಾಗ ನಿರಾಶಳಾದಳು. ಸುಮಾರು 10,000 ಅಡಿ ಎತ್ತರದಲ್ಲಿರುವ ದೋಚುರ್ಲಾ ಕಣಿವೆ ತಲುಪಲು ದಟ್ಟಡವಿಗಳ ನಡುವೆ ಹಳ್ಳ ತಿಟ್ಟಿನ ಹಲವಾರು ತಿರುವುಗಳ ರಸ್ತೆಯ ಮೇಲೆ ಪ್ರಯಾಣ. ದಾರಿ ಉದ್ದಕ್ಕೂ ಮತ್ತೆ ಮತ್ತೆ ಎದುರಾಗುವ ಪವಿತ್ರ ಗೋಂಪಾಗಳು, ಬೌದ್ಧ ಸನ್ಯಾಸಿಗಳ ಆಸ್ತಿಗಳನ್ನು ಹುಗಿದಿಟ್ಟ ಪುಟ್ಟ ಗೋಪುರಗಳು, ಭರ್ರನೆ ಬೀಸುವ ಗಾಳಿಯಲ್ಲಿ ಪಟಪಟನೆ ಹಾರುತ್ತಿರುವ ಪ್ರಾರ್ಥನಾ ಧ್ವಜಗಳು. ಇವುಗಳ ಮೇಲೆ ಬರೆದಿರುವ ಶಾಂತಿ ಮಂತ್ರಗಳು ಗಾಳಿಯಲ್ಲಿ ಪರ್ವತದಾಚೆ ತೇಲಿಕೊಳ್ಳುತ್ತಾ ಪ್ರಪಂಚದ ಉದ್ದಕ್ಕೂ ಚಲಿಸಿ ಶಾಂತಿಯ ಸಂದೇಶಗಳನ್ನು ಹರಡುತ್ತಲೇ ಇರುವವಂತೆ. ಜೊತೆಗೆ ರಾಶಿ ರಾಶಿ ಮೋಡದ ಮುಸುಕು ಹಾಕಿ ತೆರೆಯುವ ಪ್ರಕೃತಿಯಾಟ. 108 ಪವಿತ್ರ ಗೋಂಪಾಗಳಿರುವ ಪವಿತ್ರ ಸ್ಥಳ ದೋಚುರ್ಲಾ. ಗಾಡಿಯಿಂದ ಇಳಿದು ನಡುಗುತ್ತ ನಿಂತರೆ ಒಂದು ಕ್ಷಣ ಬಿಳಿಯ ಮಂಜಿನತೆರೆ. ಮರುಕ್ಷಣದಲ್ಲಿ ಸ್ಪಷ್ಟವಾಗಿ ತೆರೆದುಕೊಳ್ಳುವ ಸಾಲು ಸಾಲು ಗೋಂಪಾಗಳು. ಗಗನಕ್ಕೇ ಏರುವ ಪ್ರಾರ್ಥನಾ ಧ್ವಜಗಳು.ಎತ್ತರದಲ್ಲಿ ಟಿನ್‌ಚಾವಣಿಯ ಒಂದು ಟೀ ಶಾಪ್. ಅದರ ಎದುರು ಹತ್ತಾರು ಕಪ್ಪುಜೂಲು ನಾಯಿಗಳು. ಟೀ ಶಾಪನ್ನು ನಡೆಸುತ್ತಿದ್ದವರೂ ಇಬ್ಬರು ಹುಡುಗಿಯರೇ. ಒಳಗಡೆ ಗೋಡೆಗಳಿಗೆ ದಟ್ಟ ಹಸಿರು ಬಣ್ಣ. ಗಾಜಿನ ವೇಸ್‌ಗಳಲ್ಲಿ ಕೆಂಪು ಪ್ಲಾಸ್ಟಿಕ್ ಹೂವುಗಳು...

ಒಂದು ಸ್ಟೋವ್, ಫ್ಲಾಸ್ಕ್‌ಗಳು, ಬಾಯ್ಲರ್. ಅದರ ಮೇಲೆ ಹತ್ತಿರವೇ ಹರಿಯುವ ಝರಿಗಳ ಬದಿಯಿಂದ ತಂದ ಗುಂಡುಕಲ್ಲುಗಳು. ಆ ಕಲ್ಲುಗಳು ಒಳಗಡೆ ಬಿಸಿ ಹೆಚ್ಚು ಹೊತ್ತು ಇರಲು ಸಹಾಯಕರವಂತೆ. ಆ ಕೊರೆತದಲ್ಲೂ ದಿನಾ ಅವರು ಹತ್ತಿರದ ಹಳ್ಳಿಯಿಂದ ಬಂದು 3–4 ಗಂಟೆಗೆ ವಾಪಸ್ಸು ಹೋಗುತ್ತಾರಂತೆ.

4 ಗಂಟೆಯ ನಂತರ ಡ್ರೈವ್ ಮಾಡಲೇಬಾರದು. ಮಂಜು ಎಷ್ಟು ಗಾಢವಾಗುತ್ತದೆಯೆಂದರೆ 2 ಅಡಿ ದೂರ ಕೂಡಾ ಕಾಣುವುದಿಲ್ಲ, ತುಂಬಾ ಅಪಾಯ ಎಂದು ನಮಗೂ ಎಚ್ಚರಿಸಿದರು. ಅಪರೂಪಕ್ಕೆ ಎದುರಾದ ಅತಿಥಿಗಳನ್ನು ಕಂಡು ಖುಷಿಯಾದರು. “ಏನು ತಗೋತೀರ? ನೆಸ್ಕಾಫಿ. ಬ್ಯಾಗ್‌ಟೀ... ಬಟರ್‌ಟೀ... ಜೊತೆಗೆ ಬಿಸ್ಕಟ್‌ಇದೆ...’ಎಂದು ಆದರದಿಂದ ಕೇಳಿದರು. ಬಟರ್‌ಟೀ ಎಂದರೆ ಯಾಕ್ ಹಾಲಿನಿಂದ ತಯಾರಿಸಿದ್ದು ಎಂದು ತಿಳಿದಿದ್ದ ನಾವು ಮೂವರು ನೆಸ್ಕಾಫಿ ಎಂದೆವು. ಹೊರಗಡೆ ಬಂದಾಗ ಅಡ್ವೆಂಚರಸ್ ಆಗಿರಬೇಕು ಎಂದು ಭಾಷಣ ಬಿಗಿದ ಒಬ್ಬರು ಬಟರ್ ಟೀ ಹೇಳಿದರು. ನಂತರ ಬಾಯಿಗೆ ಒರೆದುಕೊಂಡ ಅದರ ರುಚಿ ತೆಗೆಯಲು ಅವರಿಗೆ ನಾವು ತಂದಿದ್ದ ಎಲ್ಲಾ ಏಲಕ್ಕಿ, ಲವಂಗ ಬೇಕಾಯಿತು!

ಮುಂದುವರಿಯುವುದು. . . . .

# ವಾಪಿ ಕನ್ನಡ ಸಂಘದಲ್ಲಿ ಕನ್ನಡ ರಾಜ್ಯೋತ್ಸವ




ನವೆಂಬರ್ 18, 2017 ರಂದು ವಾಪಿ ಕನ್ನಡ ಸಂಘದಲ್ಲಿ ರಾಜ್ಯೋತ್ಸವ ಆಚರಿಸಲಾಯಿತು. ಸರಸ್ವತಿ ಪ್ರಾರ್ಥನೆ ಹಾಗೂ ಹಚ್ಚೇವು ಕನ್ನಡದ ದೀಪದಿಂದ ಮೊದಲಾದ ಕಾರ್ಯಕ್ರಮ, ಧಾರವಾಡದ ಅಭಿವ್ಯಕ್ತಿ ತಂಡದವರಿಂದ, ಅನೇಕ ದಾಸರ ಪದಗಳನ್ನು ಭರತ ನಾಟ್ಯದ ಮಾಧ್ಯಮದಿಂದ ನೋಡುಗರ ಮನತಣಿದರು.ನಂತರ ಡಾ. ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ಮಾಧ್ಯಮ – ಮುದ್ರಣ ಹಾಗೂ ದೃಶ್ಯಗಳ ನಡುವಿನ ಒಳಿತು – ಕೆಡುಕುಗಳ ಬಗ್ಗೆ ಡಾ. ಈಶ್ವರ್ ಅಲೆವೂರು ಹಾಗೂ ಶ್ರೀ. ಶ್ರೀನಿವಾಸ ಜೋಕಟ್ಟೆಯವರು ತಮ್ಮ ಪ್ರಬಂಧಗಳು ಮಂಡಿಸಿದರು.

ಅನಂತರ ಸಭಾ ಕಾರ್ಯಕ್ರಮದಲ್ಲಿ ಶ್ರೀ. ಕೆ. ಮಂಜುನಾಥಯ್ಯನವರಿಗೆ ಸನ್ಮಾನ ಮಾಡಲಾಯಿತು. ಮಂಜುನಾಥಯ್ಯನವರು ಮಾತನಾಡುತ್ತಾ, ಕನ್ನಡ ರಾಜ್ಯೋತ್ಸವ ಅನೇಕ ಹಿರಿಯರ ಸತತ ಹೋರಾಟದ ಫಲವಾಗಿದ್ದು, ಅವರ ಪ್ರಯತ್ನ ಕೈಗೂಡಬೇಕಾದರೆ, ನಾವು ಮುಂದಿನ ಪೀಳಿಗೆಗೆ ಕನ್ನಡವನ್ನು ಬೆಳೆಸುವ ಕೆಲಸದಲ್ಲಿ ತೊಡಗಿಸಬೇಕೆಂದರು. ವಾಪಿ ಕನ್ನಡ ಸಂಘ ಸತತವಾಗಿ ಒಗ್ಗಟ್ಟಿನಿಂದ ಕನ್ನಡದ ಕೆಲಸವನ್ನು ಕೈಗೊಂಡಿರುವುದನ್ನು ಮೆಚ್ಚಿದರು. ನಂತರ ಅಭಿವ್ಯಕ್ತಿತಂಡದಿಂದ “ಮೋಹಿನಿ ಭಸ್ಮಾಸುರ” ನೃತ್ಯರೂಪಕ ತೋರಲಾಯಿತು

ಡಾ. ಮಂಜುನಾಥ್ ಅವರು ಮಾತನಾಡುತ್ತಾ, ನಮ್ಮ ದೇಶವು ಭಾಷೆಗಳ ಸಮೃದ್ಧಿ ದೇಶವಾಗಿದೆ. ಇದರಲ್ಲಿ ಕನ್ನಡ ಹಳೆಯ ಭಾಷೆ. ತಮಿಳು, ಕನ್ನಡ, ಸಂಸ್ಕೃತ ಆಮೇಲೆ ಬಂತು. ಭಾರತದ ಮೂಲ ಭಾಷೆಗಳಲ್ಲಿ ಒಂದೆನಿಸಿದ ಕನ್ನಡವು ಸಂಸ್ಕೃತದ ಸದುಪಯೋಗ ಪಡೆದು ಹೆಚ್ಚಿನ ಸ್ಪಷ್ಟತೆ ಪಡೆಯಿತು. ಅತಿ ಹಳೆಯ ಮತ್ತು ಸ್ಪಷ್ಟ ಭಾಷೆ ಕನ್ನಡವು ಒಂದೊಮ್ಮೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪೇಶ್ವೆಯವರ ಆಡಳಿತಾವಧಿಯಲ್ಲಿ ಮರಾಠಿ ಭಾಷೆಯ ಎದುರು ಅವಸಾನದ ಹಾದಿ ಹಿಡಿಯುತ್ತಿದ್ದ ಸಂದರ್ಭದಲ್ಲಿ ಮತ್ತೆ ಕನ್ನಡಕ್ಕೆ ಜೀವ ತುಂಬಿದವರು ರೈಸ್ ಅಂತಹ ಬ್ರಿಟಿಷರು. ಹಾಗಾಗಿ ಕನ್ನಡವನ್ನು ಗಟ್ಟಿಗೊಳಿಸುವಲ್ಲಿ ಬ್ರಿಟಿಷರ ಪಾತ್ರವನ್ನು ನಾವು ಮರೆಯುವಂತಿಲ್ಲ. ಕಿಟ್ಟೆಲ್ ಅಂತವರು ಕನ್ನಡಕ್ಕೆ ಬಹುದೊಡ್ಡ ಡಿಕ್ಷನರಿ ನೀಡಿರುವುದನ್ನೂ ನಾವು ನೆನಪಿಸಿಕೊಳ್ಳಬೇಕು ಎಂದರು.

ಆ ದಿನಗಳಲ್ಲಿ ಶಾಸನಗಳನ್ನು ಬ್ರಿಟಿಷರು ಹುಡುಕಿ ಹುಡುಕಿ ಬರೆದಿದ್ದರಿಂದ ಕನ್ನಡವನ್ನು ಗಟ್ಟಿಗೊಳಿಸಲು ನೆರವಾಯಿತು.


ಶ್ರೀ. ಶಂಕರಕಾಮತರು ಹಾಗೂ ಶ್ರೀ. ಭಂಡಾರಿಯವರ ಮುಂದಾಳುತನದಲ್ಲಿ ಈ ಕಾರ್ಯಕ್ರಮ ನಡೆಯಿತು.




**MATRIMONIAL**

ALLIANCE INVITED FOR A KANNADA SPEAKING BRAHMIN IYENGAR BOY -19/03/1984, 5.10” , GOTRA - SHADAMARSHANA, NAKSHATRA- CHITRA, RASHI – TULA, B.E., MBA (FINANCE) WORKING IN MUMBAI – FROM A WELL EDUCATED GIRL, DOWN TO EARTH, INTELLIGENT FROM ANY BRAHMIN FAMILY (PREFERABLE) OR OTHERS. WORKING IN INDIA, OPEN TO RELOCATING TO MUMBAI. CONTACT: 9619040718 / 9620206645, EMAIL: ajay.tirumalai@gmail.com

# "QUALITY"



✍ **Dr. H.S. Srinivas**

What is quality? We use this very often and in alternate sentences. Even then it is not defined properly. I am yet to come across a holistic, comprehensive and universal definition of the word "Quality".

Quality is an adjective used very oftenly with every noun like; quality of product, quality of service, quality of thought, quality of education, quality of answers and even quality of sleep. One definition of quality is "Customer's Satisfaction". This is also very vague. It depends on customer's perception. Perceptions do change with person to person and with time also. Even a best vendor asks the customer "are you satisfied with our product Sir?

"The very standard answer is "It is alright, but ……. ". This "but" signifies an element of dis-satisfaction. There is a famous saying "Satisfaction is hindrance to progress" This sense of dis-satisfaction is the back bone of any research, anywhere in the world. According to "Upanishad", even Nachi Kera Could not get the satisfactory answers from Lord Yama. Without going too much philosophical, let us continue ourselves to quality of products only.

Our lives are dependent in many ways on industrial products: Shelter, nutrition, communications, health care, work, recreation and national security. One basic aspect of products of this type, regardless of whether they are goods are services, is that they must be fit for use. Failure in this respect can lead to death, injury, discomfort or economic loss.

A product can be more or less, fit for use for the user, this is a question of quality. The Quality of a product can, therefore, be defined as its "fitness for use".

A customer buying a product has certain expectations. These are determined by several factors. The intended use affects these expectations. The appearance and performance of the product also have an effect. But the expectations also depend on the goodwill" carried by the brand name and by the price of the product. A high price leads to higher expectations than a low price.

If the product fulfills the customer's expectations when used, he will be pleased and say that the product is of high quality or at least of acceptable quality. If his expectations are not fulfilled, the customer with consider that the product is of low quality. We can therefore also define Quality of a product as it's "ability to fulfill the customer's expectations".

**Quality of material, design & manufacture :** One cannot expect a good quality of a product without a good quality of row materials. Low level of quality can be caused by weaknesses either in the design of the product, or in its manufacture. It is therefore appropriate to distinguish between quality of design and quality of manufacture.

Two products which have the same use but which are designed in different ways can be of different "Quality of design". There is then a difference in their inherent ability to fulfill the intended use. Quality of design is evident in the specifications to which the product will be manufactured.

A product may conform in varying degrees to the specifications. It is "quality of manufacture" which has to be monitored at every step. Quality of manufacture can be said to be the degree of conformance of the product to the Quality requirements. These should be given in the product specifications.

**Quality Parameters:**

The quality is composed of elements which we can call quality parameters. What these are is, of course, dependent on the type of product. For a mechanical electronic product, these may be concerned with performance, reliability, safety and appearance. For a pharmaceutical product, parameters such as physical and chemical characteristics, medicinal effect, toxicity, taste and shelf life may be important.Before ending this article, it anybody asks the question. "Are you satisfied with your article?". My immediate answer without mincing any words, is "It could have been better"

# ಶ್ಯಾಮಲಾ ಪ್ರಕಾಶ್ ಅವರಿಗೆ ಡಾಕ್ಟರೇಟ್ ಪದವಿ



ಕನ್ನಡ ವಿಭಾಗದ ಸಂಶೋಧನ ಸಹಾಯಕರಾದ ಶ್ಯಾಮಲಾ ಪ್ರಕಾಶ್ ಅವರು ಬರೆದು ಸಲ್ಲಿಸಿದ 'ಕನ್ನಡ ಸಾಹಿತ್ಯದಲ್ಲಿ ಸಂಗೀತದ ಸಾಹಚರ್ಯ' ಎಂಬ ಮಹಾ ಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವವಿದ್ಯಾಲಯವು ಅವರಿಗೆ ಕನ್ನಡದಲ್ಲಿ ಪಿಎಚ್.ಡಿ ಪದವಿಯನ್ನು ನೀಡಿದೆ. ಶ್ಯಾಮಲಾ ಪ್ರಕಾಶ್ ಅವರು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದರು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಈವರೆಗೆ ಕನ್ನಡ ಸಾಹಿತ್ಯದ ಜೊತೆಜೊತೆಗೆ ಅದರ ಅಂತರ್ಗತ ಭಾಗವಾಗಿ ಪ್ರವಹಿಸಿಬಂದ ಸಂಗೀತ ವಿಚಾರಗಳನ್ನು ಕುರಿತಂತೆ ಅಧ್ಯಯನ ನಡೆದಿರುವುದಿಲ್ಲ. ಕನ್ನಡ ಕಾವ್ಯಗಳಲ್ಲಿ ಹುದುಗಿರುವ ಗೇಯಗುಣ, ಸಂಗೀತ ಸಾಹಚರ್ಯದ ಮಹತ್ತರ ಸಂಗತಿಗಳನ್ನು ಡಾ. ಶ್ಯಾಮಲಾರವರು ಈ ಮಹಾಪ್ರಬಂಧದಲ್ಲಿ ಚರ್ಚಿಸಿರುತ್ತಾರೆ. ಒಟ್ಟು ಕನ್ನಡ ಸಾಹಿತ್ಯ ಚರಿತ್ರೆಯ ಹಿನ್ನೆಲೆಯಲ್ಲೇ ಸಂಗೀತದ ಸುಳಿವುಗಳನ್ನು ಅದರ ತಾಂತ್ರಿಕ ಪರಿಭಾಷೆಯೊಡನೆ ಗುರುತಿಸುವ ಈ ಮಹಾಪ್ರಬಂಧವು ಕನ್ನಡಕ್ಕೆ ಹೊಸ ಬಗೆಯ ಸಂಶೋಧನೆಯಾಗಿರುತ್ತದೆ" ಎಂದು ಮೌಲ್ಯಮಾಪಕರಾಗಿ ಆಗಮಿಸಿದ ಹಿರಿಯ ಸಾಹಿತಿ ಡಾ. ಕೃಷ್ಣಮೂರ್ತಿ ಹನೂರು ಅವರು ಈ ಮಹಾಪ್ರಬಂಧದ ಕುರಿತಾಗಿ ಶ್ಲಾಘಿಸಿದ್ದಾರೆ.

ಮೂಲತಃ ಅರಕಲಗೂಡಿನವರಾದ ಶ್ಯಾಮಲಾ ಪ್ರಕಾಶ್ ಬಾಲ್ಯದಿಂದಲೂ ಸಂಗೀತ ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿದವರು. ಅವರು ಸಂಗೀತ ಜೂನಿಯರ್ ಮತ್ತು ಸೀನಿಯರ್ ಗ್ರೇಡ್‌ನಲ್ಲಿ ಅತ್ಯುತ್ತಮ ಅಂಕ ಪಡೆದು ತೇರ್ಗಡೆಯಾಗಿದ್ದಾರೆ. 2005ರಲ್ಲಿ ವಿದುಷಿ ಪದವಿ ಮತ್ತು ದಾಸಸಾಹಿತ್ಯದಲ್ಲಿ ಸೀನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಗಳಿಸಿದ್ದಾರೆ. ಸಂಸ್ಕೃತದಲ್ಲಿ 'ಕಾವ್ಯ– ಸಾಹಿತ್ಯ' ಪದವಿ, ಗಮಕ ಕಲಾ ಪರಿಷತ್ತಿನ ಕಾಜಾಣ–ಪಾರೀಣ ಪದವಿ ಇವರ ಹಿರಿಮೆಗಳು. ತನ್ನದೇ ನಾದೋಪಾಸನ ಸಂಸ್ಥೆಯ ಮೂಲಕ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ. ಕರ್ನಾಟಕ ಸಂಘದ ಕಲಾಭಾರತಿ ತಂಡದ ನಾಟಕಗಳಿಗೆ ಸಂಗೀತ ನೀಡಿದ್ದಾರೆ. ಅವರ ಸಂಗೀತ ನಿರ್ದೇಶನಕ್ಕಾಗಿ ನಾಟಕ ಸ್ಪರ್ಧೆಯಲ್ಲಿ ಅತ್ಯುತ್ತಮ ಸಂಗೀತ ಪ್ರಶಸ್ತಿ ಲಭಿಸಿದೆ. ಡಾ. ಶ್ಯಾಮಲಾ ಅವರ ಶಾಸ್ತ್ರೀಯ ಸಂಗೀತ ಕಛೇರಿಗಳು ಒಳನಾಡು ಮತ್ತು ಹೊರನಾಡಿನ ಪ್ರತಿಷ್ಠಿತ ವೇದಿಕೆಗಳಲ್ಲಿ ನಡೆಯುತ್ತಿವೆ. ಹತ್ತು ವರ್ಷಗಳಿಂದ ಇವರ ಅಂಕಣ ಬರೆಹ 'ನಾದೋಪಾಸನ' ಕರ್ನಾಟಕ ಸಂಘದ ಸ್ನೇಹ ಸಂಬಂಧದಲ್ಲಿ ಪ್ರಕಟವಾಗುತ್ತಿದೆ.

ಆಯ್ದ ಅಂಕಣಗಳ ಗ್ರಂಥ ನಾದೋಪಾಸನ ಮುಂಬಯಿ ಕರ್ನಾಟಕ ಸಂಘ ಮತ್ತು ಬೆಂಗಳೂರಿನ ಗಾಯನ ಸಮಾಜದಲ್ಲಿ ಬಿಡುಗಡೆಗೊಂಡಿದೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಾಗೂ ಸೆಂಟರ್ ಫಾರ್ ರಿಸರ್ಚ್ ಇನ್ ರೀಜನಲ್ ಲಾಂಗ್ವೇಜಸ್ ಆಫ್ ಇಂಡಿಯಾದಿಂದ ಇವರ ಈ ಕೃತಿಗಾಗಿ ಪುಸ್ತಕ ಆಯ್ಕೆ ಪ್ರಶಸ್ತಿ ದೊರೆತಿದೆ. 'ಕೃಷ್ಣಂ ವಂದೇ' ಶ್ಯಾಮಲಾ ಅವರ ಪ್ರಸಿದ್ಧ ಧ್ವನಿಸುರುಳಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಮತ್ತು ಮುಂಬಯಿ ಕನ್ನಡ ಕಲಾಕೇಂದ್ರ ಜಂಟಿಯಾಗಿ ಕೊಡಮಾಡಿದ 'ಲಲಿತಾ ಕಲಾಶ್ರೀ' ಪ್ರಶಸ್ತಿಗೂ ಅವರು ಭಾಜನರಾಗಿದ್ದಾರೆ. ಡಾ. ಶ್ಯಾಮಲಾ ಪ್ರಕಾಶ್ ಅವರು ಅನೇಕ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟಿದ್ದಾರೆ. ಅವರಿಗೆ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರು ಅಭಿನಂದನೆಯನ್ನು ತಿಳಿಸಿದ್ದಾರೆ.

****

# ಕನಕದಾಸ ಜಯಂತಿ

ಅಸೋಸಿಯೇಷನ್ ನವೆಂಬರ್ 19, 2017 ರಂದು ಕನಕದಾಸರನ್ನು ನೆನೆಯಿತು. ಇಬ್ಬರು ಹಿರಿಯರು ದೀಪವನ್ನು ಹತ್ತಿಸಿದರು. ಡಾ. ಮಂಜುನಾಥರು ಮಾತನಾಡಿ ಕನಕದಾಸರು ಕನ್ನಡನಾಡಿಗೆ ಇತ್ತ ಮುತ್ತು ರತ್ನಗಳನ್ನು ನೆನೆದರು. ಕವಿಯ ಚಾತುರ್ಯ, ಧರ್ಮ ಜ್ಞಾನ, ಅಂತೆಯೇ ಅಪಾರವಾದ ಭಕ್ತಿ, ಯಾವ ಪಂಥದ ಬಲೆಗೂ ಸಿಕ್ಕದೆ "ನೀ ಮಾಯೆಯೊಳಗೋ, ನಿನ್ನೊಳು ಮಾಯೆಯೋ" ಎನ್ನುವ ಗಹನವಾದ ಅಧ್ಯಾತ್ಮ ತತ್ವವನ್ನು ಸಾರಿದರು. ಒಬ್ಬ ತಾನು ತನ್ನ ಗಳಿಕೆಯಿಂದಲೇ ಬ್ರಹ್ಮತ್ವವನ್ನು ಈ ಕಾಲದಲ್ಲಿಯೇ ಪಡೆದಿದ್ದರೆ, ಅದು ಕೇವಲ ಕನಕದಾಸರೇ ಎಂದರು.

ನಂತರದಲ್ಲಿ ಸಂಗೀತ ಸೇವೆಯಿಂದ ಶ್ರೀಮತಿ ಶ್ಯಾಮಲಾ ರಾಧೇಶ್ ಎಲ್ಲರನ್ನೂ ಭಾವವೇಶದಲ್ಲಿ ಲೋಕಕ್ಕೆ ಕರೆದೊಯ್ದುದಲ್ಲದೆ, ಕುಮಾರಿ ಮಹತಿ ಹಾಗೂ ಕುಮಾರಿ ದಿತ್ಯಾ ಅವರ ಸಂಗೀತ ಸೇವೆಗೆ ಎಡೆಮಾಡಿಕೊಟ್ಟರು. ಸೇವೆಯ ಅಂತ್ಯದಲ್ಲಿ ಕನಕದಾಸರ ಮೇಲೆ ಒಂದು ಚಿತ್ರ ಪ್ರದರ್ಶನವಾಯಿತು.

# ಕರ್ನಾಟಕ ರಾಜ್ಯೋತ್ಸವ

ಯುವತಂಡದ ಕು. ಪ್ರಜ್ಞಾ, ಮಹತಿ, ದಿತ್ಯಾ ಹಾಗೂ ಕು. ಅಶ್ವಿನ್, ಶ್ರೀಜಿತ್ ಹಾಗೂ ಅಭಿರಾಮ್ ನೇತೃತ್ವದಲ್ಲಿ ಕನ್ನಡ ಬಾವುಟವನ್ನು ಹಿಗ್ಗಿನಿಂದ ಹಾರಿಸಲಾಯಿತು. ಅನೇಕ ಕನ್ನಡ ಒಲವಿನ ಗೀತೆಗಳನ್ನು ಒಂದು ಬಾವುಟವಾಗಿ ನೇಯ್ದು ಯುವತಂಡದವರು ಹಾರಿಸಿದರು. ಈ ಬಾವುಟ ಬಟ್ಟೆಯದಲ್ಲ, ಭಾವದಿಂದ ಬಂದದ್ದು. ನಂತರ ಕು. ಅಶ್ವಿನ್ ತಾನೇ ನಿಯೋಜಿಸಿದ "ಥಟ್ ಅಂತ ಹೇಳಿ" ಎಂಬ ಕನ್ನಡ ನಾಡಿನ ಬಗ್ಗೆ "Quiz" ಕಾರ್ಯಕ್ರಮವನ್ನು ಒಂದು ಗಂಟೆಯ ಕಾಲ ಚಾಕಚಕ್ಯತೆಯಿಂದ ನಡೆಸಿದರು. ಕನ್ನಡ, ನಾಡು, ನುಡಿ, ಚರಿತ್ರೆ ಎಲ್ಲವನ್ನೂ ಕುರಿತ ಈ Quiz ನಿಂದ ನೆರೆದ ಅನೇಕ ಹಿರಿಯರಿಗೆ, ಕನ್ನಡ ನಾಡು, ನುಡಿಯ ನೆನಪು ಮರುಕಳಿಸಿತು. ಯುವತಂಡದ ಈ ಕೊಡುಗೆ ಮೆಚ್ಚುವಂತಹದು

# INDIAN JUDICIARY IN CRISIS



✍ **Dr. B. R. Manjunath**

The Constitution of India has separated powers and jurisdiction for the Parliament, Executive and the Judiciary. However, as the powers to interpret the Constitution has been given to the Judiciary, in the last two decades, the Judiciary has been usurping many powers of both the Legislature and the Executive.

Take the case of attempting to exclude commercial establishments in the residential localities of New Delhi Capital Region. The Supreme Court attempted to make its own laws and try to impose it upon the capital. Why a broader view for the entire country not taken and norms setup and ask the parliament to enact a Model Law, which the states could follow is a million Dollar question.

Recently. It tried to impose a ban on the sale of fire crackers during Diwali, only in the NCRB, saying it is a health issue and pollution needs to be checked. It even refused to hear or acknowledge that this pollution problem is not restricted or unoque to NCR, but is a phenomenan which has affected, Pakistan and the entire North India. That its attempt to control pollution in NCR, is a jutter failure is well recorded. Why the SC could not issue norms for the entire country, if it thpught that fire crackers are the real problem? For years it is known that unchecked sale and registration of motor vehicles in Delhi, which far exceeds any norms any where in the world and accounts for nearly 25 % of the pollution and emission of carbon mponoxide and particulate deposits. It is so even in Bangalore and Chennai. But the SC in its vast wisdom did not consider to ban any further sale and registyration of motor vehicles?

Last year, led by the current Chief Justice Deepak Mishra, the Bench declared, that every one in Cinema Halls should be on their feet when National Anthem is played. This practice had been given upmany years back, by the Government itself. But the SC thought it necessary to teach a lesson or two in Patriotism. Now the same SC under a different Judge is saying “There is no need to exhibit patriotism by standing up” It is also asking the Centre to file iots opinions. But pray, why the Sc did not think it fit to ask the Central Govt for its opinion, before decreeing that the citizens should stand up? Fine let us assume, there is no need to wear our patriotism on our sleeve. But pray, why should these same judges expect everyone in the Courtroom to “stand up” when they enter or leave the courtroom? They also expect every one address them as “Your Honour”. This sounds certainly of double standards.

Take the case of Awards and Prashasties. The SC has ruled that awards like Bharat Ratna, Padma Vibhushan, and Padma Shri cannot be used as Titles. This is right, as now there is no British Empire doling out titles. But how about Judges themselves? When they are on the Bench they are addressed “Justice so as so”. But even after they retire from the Bench, they continue to use by printing Visiting Cards, as “Justice so and so” as if ity is a title, bestowed jupon them for life. It is apparent that they consider themselves as a separate category. Some retired judges have argued, that they put Retired within brackets! But even Pradhan Mantris are referred to as “Former Pradhan Mantris” in a second Line. The prefixture does not have “Pradhan Mantri retired” in Brackets. Well this certainly does not apply to our Honourable Judges.

Our Constitution lays down checks and balances on everyone. But the Judiciary’s conduct in the last 2 decades, that they are three cuts above others. There is ample evidence available from both the Baer and within the Judiciary, that corruption is rampant in both lower and higher Judiciary. Justice Desai and Thelma case in High Court of Bombay has not been forgotten. But there is no evidence that the SC has been attempting to either appoint clean persons for the Judiciary, or even check corruption within itself. The recent case of Medical Council of India to favour a particular Institution and the involvement of both retired and current Judges, is a serious incident, which has thrown not only the Judiciry, but the Chief Justice itself in poor light. Instead of setting up an independent investigation, the Chief Justice has tried to pull a rug on all allegations, by presiding upon a Bench to quash the judgement of Justice Chalameshwar for setting up of another 5 Judges Bench. For long it is well known to all litigants, if you

want to win your case, you should put up a particular Advocate, to argue before a paarticular Judge. It is too much to expect that a part of the fees which some lawers are charging in crores of Rupees , does not end up in some judges pockets.

In 2001, Advocate Prashant Bhushan, made an allegation that Supreme Court Judges are corrupt. The SC started Contempt proceedings against hi, But the next day, his father, Advocate Shanti Bhushan, who was also earlier a Law Minister, filed an Affidavit before the SC, that he has evidence that out of the16 Chief Justices of India, 12 were corrupt, 2 were honest, and he gives benefit of doubt to the remaining 2. The case has not come up for hearing during the last 6 years, even though, we have seen 3 Chief Justices retire. Why is the SC remaining silent and not proceed against Advocate Prashant Bhushan for contempt even after 6 years. Are they waiting for Advocate Shanti Bushan to be no more?

Let us look at the record of SC in standing up for the Constitution. During the Emergency, Indira Gandhi imprisoned the entire opposition And carried out 25 amendments to the constitution, and the SC has held that these are valid amendments. Even the preamble was amended to include “secular”. And now the Sc says that secularism is fundamental to our constitution and cannot be altered or amended! If this was so, why did not our founding Fathers did not include it in first place? It would not have required and amendment to be carried put by imprisoning the entire opposition.

Take the case of BCCI. The Board of Cricket club of India is just a Society registered under Societies Act of 1860, in Chennai. The SC has no powers, least of all appoint “impromptu” Lodha Committee, to alter its Byelaws. It is for the Executive and Legislature to direct any alteration of Byelaws of any Society. But the Sc has been going at it Hammer and tongs. Here the separation of powers are blatantly disregarded.

Take the case of Inter State River disputes. Article 250 explicitly keeps interstate river disputes outside the perview of the Judiciary. It is for the Parliament to appoint Tribunals to decide upon such disputes and legislate. Nay the SC in utter disregard OF THE Constitution issues directives to one state or the other. While Govt of Karnataka succumbed, the Govt of Punjab discards such diktats.

Recently the Madras HC ordered the Tamil Nadu Government to waive the loans of Rs 40,000 crores, given to farmers. Is the next going to be the Judges managing and announcing Budgets for the states? Are they going to levy Taxes also? We should watch eagerly

The Judiciary is arguing that it has insufficient number of judges in all the courts and has been accusing the Executive of stalling appointments. It has held the National Judicial Commission Act as unconstitutional and rejected, but called for an MOU for the [pontments of judges. It has been rejecting all proposals to screen the appointments of judges even on the basis of National Security. But saner voices within the Collegium, like Justice Chalameshwar have been dissenting with the system, which is purely arbitrary, which has resu;lted in aberrations like the appoint of Balakrishnan , Karnan , Mohan and various others in High Courts and SC. Such appointment have brought further disrepute to the Judiciary.

There have been continuous criticism of our polity, which has become dynastic in all states. But how about theJudiciary? A close look will reveal shocking facts. It is nothing but a Family Courtbecause as of 2016, 11 out of 28 sitting judges had either judges or legal luminaries as relatives.

- Former CJI T S Thakur’s father late Devi Dass Thakur and brother D S Thakur, were and are judges in J & K HC
- Current CJI Deepak Mishra: His uncle Ranganath Mishra , former CJI
- Justice M B Lokur: Father Bhimji N Lokur, Judge Allahabad HC
- Justice Pinaki C Ghose: Father late Shambu Chandra Ghose, former CJI, Calcutta HC
- Justice S A Bobade: Father Arvind Bobade, former AG, Maharashtra: Maternal GrandFather G late Bhubaneshwar Prasad Sinha, former CJI
- Justice Arun Mishra: Father Late H G Mishra, Madhya Pradesh HC

- Justice R F Nariman: Father, Fali Nariman, Senior Advocate SC:
- Justice Uday Lalit: Father U R Lalit, Judge Delhi HC
- Justice Amitava Roy: Father A B Roy Senior Advocate, Father-in-law: Salil Kumar Datta Judge Calcutta HC
- Justice D Y Chandrachud: Father Y V Chandrachud, former CJI

**Former CJIs with family linkages**:

- R M Lodha : Father S M Lodha, Rajasthan HC, Uncle C M Lodha, CJI Rajasthan
- Altamas Kabir: Father Minister in W B. His sister was elevated to Calcutta HC in 2010, when Altamas Kabir was in the SC Collegium
- VN Khare : Uncle S C Khare was Indira Gandhi's lawer in the famous election case

Out of 716 judges in various HC, 135 were family judges. If general public view this with suspicion, you cannot really blame them, as the collegiums process in SC is opaque. Justice Chalameshwar had even declined o attend the collegiums meetings, if papers were not forwarded and recommendations not in writing.

The SC had four decades earlier declined to answer a presidential reference on citizenship under an Act in J & K. But it took 19 years after Presidential reference to decline! Two decades earlier it had declined a Presidential reference on RamJanma Bhumi dispute. But now that it has landed in its lap, it has not taken up for the last 3 years, during which time 2 CJIs have retired. It is no wonder, it is dragging its feet. But see the alacrity with which it has acted on other religious matters, where no fundamental rights are involved. Like the Abhishek rituals in Ujjain's Mahakala Temple. We can also recall how two judges of SC, Ranganath Mishra and Savyasachi Mukherjee, heard The Reliance G Debenture case, sitting at their residence, on a Sunday, and delivered judgement on the same day. This was at a time, when there were more than 140 undertrials, who were behind the bars for over 20 decades. No one in the Supreme Court spoke about individual Liberty as a Fundamental right. This was so these under trials could not afford to suitable lawers with connections to argue before the SC.

The defence of SC that it is short of judges does not cut ice, as many judges served their time, took pension, and some of them even became Chair persons of National Human Rights Commission, while these under rtials were serving no sentence and were still behind the bars. Furthering the shame, there were more than 700 persons all over the country, who had been detained and no charge sheet was ever filed in any court of Law. While Lalu has been convicted and released on Bail, to campaign and rule in Bihar

In most countries, only one Appeal is allowed in a higher cojurt. But in India, SC pulls all cases to itself, whether it involves a Constitutional issue or not. It is eager to deal with all cases. With the result, all cases travel to SC and the travel time extends for over 30 years, even aftefr litigants are dead. Look at the Ramajanmabhumi-Babri Masjid case. It is pending even after 130 years. The litigants and many witnesses are already dead, but the judiciary is still receiving salary and pension. How many adjournments you would allow to any side? Cannot the Judiciary cut down the number of adjournments? Or is it afraid of the Bar?

**Justice delayed is Justice denied**

During these 70 years of the Republic, none of the pillars of Democracy, have covered themselves with , including the Judiciary

Freedom of speech allows a citizen to rightfully criticize and comment upon the workings Parliament/Legislatures and Executives. But not the Judiciry, because it holds the threat of Contempt Proceedings. But from Indian History, we cn draw lessons. No threats from the Rulers evefr stopped our ancestors and founding fathers to criticize the Crown, Privy Council. The threat of Sedition did not stop the citizens. It is time the Judiciary ralise that a threat of contempt hardly stops enraged citizens. How many citizens you would arrest for contempt if everyone starts questioning and commenting? Wisdom should dawn on the Judiciary, before th citizenry comes on to the streets, Judiciary should itself accept its checks and balances before it is enforced on it. The moral is "You have the right to judge others, only if you can judge yourselves first"

Let us hope the Judiciary wakes up before it commits contempt on itself

1. **ವ್ಯತ್ಯಾಸ :**

ಧೀರಜ್: ಅಲ್ವೋ, ಗರ್ಲ್‌ಫ್ರೆಂಡ್‌ಗೂ, ಹೆಂಡತಿಗೂ ಏನು ವ್ಯತ್ಯಾಸ?

**ನೀರಜ್:** ಇಷ್ಟೇ. ನಿಮ್ಮ ಎಲ್ಲಾ ಪ್ರಶ್ನೆಗಳಿಗೂ ಗರ್ಲ್‌ಪ್ರೆಂಡ್ ಉತ್ತರಿಸುತ್ತಾಳೆ. ನಿಮ್ಮೆಲ್ಲ ಉತ್ತರಗಳಿಗೂ, ಹೆಂಡತಿ ಪ್ರಶ್ನಿಸುತ್ತಾಳೆ.

2. **ನೀಹಾರಿಕಾ:** ಭಾರತದಲ್ಲಿ ಪ್ರತಿ ಸೆಕೆಂಡಿಗೂ ಮಹಿಳೆಯೊಬ್ಬಳು ಮಗುವಿಗೆ ಜನ್ಮ ನೀಡುತ್ತಾಳೆ

**ಶ್ರೇಯಾ:** ನಾವು ಆದಷ್ಟು ಬೇಗ ಆ ಮಹಿಳೆಯನ್ನು ಕಂಡುಹಿಡಿಯಬೇಕು

3. **ಹೆಂಡತಿ:** ನಾನೇನಾದರೂ ನಿಮ್ಮನ್ನ ಬಿಟ್ಟು ಹೋದರೆ ಏನು ಮಾಡ್ತೀರಾ?

**ಗಂಡ:** ಟೀವಿ, ಪೇಪರ್‌ನಲ್ಲಿ ಹಾಕಿಸ್ತೀನಿ

**ಹೆಂಡತಿ:** ಏನಂತ?

**ಗಂಡ:** ಎಲ್ಲಾದರೂ ಇರು, ಎಂತಾದರೂ ಇರು ನೀ ಎಂದೆಂದಿಗೂ ಅಲ್ಲಿಯೇ ಇರು, ಅಂತಾ

**ಹೆಂಡತಿ:** ಥೂ ನಿಮ್ಮ

4. **ಜೀಯೋ ಜಯರಾಮ**

**ಸೆನ್ಸಸ್‌ನವರು:** ನಿಮಗೆ ಎಷ್ಟು ಮಕ್ಕಳು?

**ಮನೆಯವನು:** 5

**ಸೆನ್ಸಸ್:** ಹೆಸರು ಹೇಳ್ತೀರಾ?

**ಮನೆ:** ಮೊದಲನೆಯವನು "ನೆಟ್ ನಾರಾಯಣ"

ಎರಡನೆಯವನು "ಫೇಸ್ಬುಕ್ ಪ್ರಹ್ಲಾದ"

ಮೂರನೆಯವನು "ಚಾಟಿಂಗ್ ಚರಣ"

ನಾಲ್ಕನೆಯವನು "ಸ್ಕೈಪ್ ಸಂತೋಷ"

**ಸೆನ್ಸಸ್:** ಸಾರ್ ಬರೀ ಗಂಡು ಮಕ್ಕಳೇ ಇರೋದಾ?

**ಮನೆ:** ಇಲ್ಲಾ ಕೊನೆಯವಳು ಮಗಳು

**ಸೆನ್ಸಸ್:** "ವಾಟ್ಸಪ್ ವಾರುಣಿ"

**ಸೆನ್ಸಸ್:** ನಿಮ್ಮ ಮನೆಯವರ ಹೆಸರೇನು?

**ಮನೆ:** "ಗೂಗಲ್ ಗೀತಾ"

**ಸೆನ್ಸಸ್:** ಸರಿ ಬರ್ತೀವಿ.

**ಮನೆ:** ಆದರೆ ನೀವು ನನ್ನ ಹೆಸರೇ ಬರೆಕೊಳ್ಳಲಿಲ್ವಾ

**ಸೆನ್ಸಸ್:** ಗೊತ್ತಾಯ್ತು ಬಿಡಿ ಸಾರ್, ನೀವು "ಜೀಯೋ ಜಯರಾಮ್" ಅಂತಾ

**ಮನೆ:** !!!!!!



5. **ಬೆಸ್ಟ್ ಕೆಲಸ**

ಮೂತ್ರಕೋಶ ತಜ್ಞ ಡಾಕ್ಟರ್ ರಾಜೀವ್ ಮನೆಯಲ್ಲಿ ನಲ್ಲಿ ರಿಪೇರಿ ಮಾಡಿಸಲು, ನೆಟ್ ನೋಡಿ ಪ್ಲಂಬರ್ ಒಬ್ಬನನ್ನು ಕರೆಸಿದರು. ಬಂದವನು ಚಕಚಕನೆ ಹದಿನೈದು ನಿಮಿಷದಲ್ಲಿ ರಿಪೇರಿ ಮಾಡಿ, ಟೆಸ್ಟ್ ಮಾಡಿ ಬಿಲ್ ಕೈಗಿತ್ತ. ಅದರಲ್ಲಿ Investigation Rs. 1000 Operation Rs. 500, Testing Rs. 500 ಅಂತ ಬರೆದಿತ್ತು. ಡಾ. ರಾಜೀವ್ "ಏನಯ್ಯಾ ಇದು? ನಾನು ಮನುಷ್ಯ ದೇಹಕ್ಕೇ ಪ್ಲಂಬಿಗ್ ಮಾಡಿದರೂ ಇಷ್ಟಾಗುವುದಿಲ್ಲವಲ್ಲ" ಎಂದರು. ಅದಕ್ಕವನು "ಸಾರ್, ನಾನು UROLOGIST. ಅದಕ್ಕೆ ಆ ಕೆಲಸಬಿಟ್ಟು ಈ ಕೆಲ್ಸ ಮಾಡುತ್ತಿದ್ದೇನೆ, ಇದರಲ್ಲಿ Risk ಇಲ್ಲ, Haemmorage ಇಲ್ಲ Anasthetician, Nurse ಅಗತ್ಯ ಇಲ್ಲ. ಅದೆಲ್ಲಾ ಸೇರಿದರೆ ಇನ್ನೂ ಹೆಚ್ಚಾಗುತಿತ್ತು" ಎಂದ.

6. ನನ್ನ ಅರ್ಧಾಂಗಿ ತನ್ನ ಹೆಸರು ಸಾರ್ಥಕಪಡಿಸಿಕೊಂಡಿದ್ದಾಳೆ, ನನ್ನ ಸಂಬಳದಲ್ಲಿ ಅರ್ಧ ನುಂಗಿ.

7. ಸೊಸೆ ಅತ್ತೆಯನ್ನು ತರಾಟೆಗೆ ತೆಗೆದುಕೊಂಡು ಹಿಗ್ಗಾಮುಗ್ಗಾ ಬೈದಾದ ಮೇಲೆ, ಅತ್ತೆಯ ಸಂದರ್ಶನ ಮಾಡಿದೆವು. ಆಕೆ ಸಂತಸದಿಂದ "ನನ್ನ ಸೊಸೆಯಂಥವಳು ಎಲ್ಲೂ ಇಲ್ಲ" ಎಂದಾಗ ನಮಗೆಲ್ಲಾ ಕಕ್ಕಾ ಬಿಕ್ಕಿ ಆಯ್ತು. ಏನಿದರ ರಹಸ್ಯ ಅಂತಾ ಪಕ್ಕದ ಮನೆಯವರನ್ನ ಕೇಳಿದಾಗ ಗೊತ್ತಾಯ್ತು ಅತ್ತೆ ಕಿವುಡಿ ಅಂತ.

# Understanding Mutual Fund Schemes



✍ K. Kamala

We are now well versed with concept of SIP. One of the important aspects of SIP is choosing the schemes. The choice of scheme would also depend on your need, milestone and risk appetite. So, now let us understand different types of mutual fund schemes.

I. Schemes according to Maturity Period: A mutual fund scheme can be classified into open-ended scheme or close-ended scheme depending on its maturity period.

Open-ended Fund/ Scheme: An open-ended fund or scheme is one that is available for subscription and repurchase on a continuous basis. These schemes do not have a fixed maturity period. Investors can conveniently buy and sell units at Net Asset Value (NAV) related prices which are declared on a daily basis. The key feature of open-end schemes is liquidity. For SIP, it is highly recommended to opt for open ended fund so that entry and exit are always available.

Close-ended Fund/ Scheme: A close-ended fund or scheme has a stipulated maturity period e.g. 5-7 years. The fund is open for subscription only during a specified period at the time of launch of the scheme. Investors can invest in the scheme at the time of the initial public issue and thereafter they can buy or sell the units of the scheme on the stock exchanges where the units are listed. In order to provide an exit route to the investors, some close-ended funds give an option of selling back the units to the mutual fund through periodic repurchase at NAV related prices. SEBI Regulations stipulate that at least one of the two exit routes is provided to the investor i.e. either repurchase facility or through listing on stock exchanges. These mutual funds schemes disclose NAV generally on weekly basis.

II. Schemes according to Investment Objective: A scheme can also be classified as growth scheme, income scheme, or balanced scheme considering its investment objective. Such schemes may be open-ended or close-ended schemes as described earlier. Such schemes may be classified mainly as follows:

Growth / Equity Oriented Scheme The aim of growth funds is to provide capital appreciation over the medium to long-term. Such schemes normally invest a major part of their corpus in equities. Such funds have comparatively high risks. These schemes provide different options to the investors like dividend option, capital appreciation, etc. and the investors may choose an option depending on their preferences. The investors must indicate the option in the application form. The mutual funds also allow the investors to change the options at a later date. Growth schemes are good for investors having a long-term outlook seeking appreciation over a period of time.

Income / Debt Oriented Scheme: The aim of income funds is to provide regular and steady income to investors. Such schemes generally invest in fixed income securities such as bonds, corporate debentures, Government securities and money market instruments. Such funds are less risky compared to equity schemes. These funds are not affected because of fluctuations in equity markets. However, opportunities of capital appreciation are also limited in such funds. The NAVs of such funds are affected because of change in interest rates in the country. If the interest rates fall, NAVs of such funds are likely to increase in the short run and vice versa. However, long term investors may not bother about these fluctuations.

Balanced Fund: The aim of balanced funds is to provide both growth and regular income as such schemes invest both in equities and fixed income securities in the proportion indicated in their offer documents. These are appropriate for investors looking for moderate growth. They generally invest 40-60% in equity and debt instruments. These funds are also affected because of fluctuations in share prices in the stock markets. However, NAVs of such funds are likely to be less volatile compared to pure equity funds.

Money Market or Liquid Fund: These funds are also income funds and their aim is to provide easy liquidity, preservation of capital and moderate income. These schemes invest exclusively in safer short-term instruments such as treasury bills, certificates of deposit, commercial paper and inter-bank call money, government securities, etc. Returns on these schemes fluctuate much less compared to other funds. If investors have surplus funds for short term, instead of parking it in SB Account, such funds could be deployed in money market or liquid fund.

Gilt Fund: These funds invest exclusively in government securities. Government securities have no default risk. NAVs of these schemes also fluctuate due to change in interest rates and other economic factors as is the case with income or debt oriented schemes.

Index Funds: Index Funds replicate the portfolio of a particular index such as the BSE Sensitive index, S&P NSE 50 index (Nifty), etc These schemes invest in the securities in the same weightage comprising of an index. NAVs of such schemes would rise or fall in accordance with the rise or fall in the index, though not exactly by the same percentage due to some factors known as "tracking error" in technical terms. Necessary disclosures in this regard are made in the offer document of the mutual fund scheme.

There are also exchange traded index funds launched by the mutual funds which are traded on the stock exchanges

Note : The opinion expressed are personal. Information is sourced from public source for the purpose of knowledge creation only.

# ಮೈಸೂರಿನಲ್ಲಿ ಸಾಹಿತ್ಯ ಸಮ್ಮೇಳನ

83ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮೈಸೂರಿನಲ್ಲಿ ನವೆಂಬರ್ 24, 25, 26 ರಂದು ನಡೆಯಿತು. ಕಿಕ್ಕಿರಿದ ಜನಸಂದಣಿಯನ್ನು ನೋಡಿ ಮನದಣಿದರೂ ಕೂಡ, ಸಮ್ಮೇಳನ ನಡೆದ ರೀತಿಯನ್ನು ನೋಡಿ ಮನನೊಂದಿತು. ಮೊದಲಿನಿಂದ ಕಡೆಯವರೆಗೆ ಸಾಹಿತ್ಯದ ಕಂಪು ಇನಿತಾದರೂ ಇಲ್ಲದೆ ಕೇವಲ ರಾಜಕಾರಣವೇ ತಾಂಡವವಾಡುತ್ತಿದ್ದ ಈ ಸಮ್ಮೇಳನ, ಕನ್ನಡ ಈಗ ಇರುವ ಸ್ಥಿತಿಯನ್ನು ತೋರುವ ಕನ್ನಡಿಯಾಗಿತ್ತು. ಹಿಂದಿನ ಶತಮಾನದ ಬರಹಗಾರರು, ಕನ್ನಡದ ಉಳಿವು, ಬೆಳವುಗಳನ್ನೇ ಗುರಿಯಾಗಿಟ್ಟುಕೊಂಡಿ ಕನ್ನಡಿಗರನ್ನೆಲ್ಲ ಒಂದುಗೂಡಿಸುವ ಕೆಲಸ ಮಾಡಿದ್ದು, ಇಂದಿನ ಪೀಳಿಗೆಯ ಬರಹಗಾರರು, ಕನ್ನಡಿಗರನ್ನು ಒಡೆಯುವ ಕೆಲಸದಲ್ಲಿ ತೊಡಗಿರುವುದನ್ನು ನೋಡಿ ಮನಸ್ಸು ನೊಂದಿತು. ಸಂಘಟಕರು ಹಗಲಿರುಳು ದುಡಿದು, ಈ ಸಮ್ಮೇಳನ ಭರ್ಜರಿಯಾಗಲಿ ಎಂದು ಮಾಡಿದ ಕೆಲಸವೆಲ್ಲ ವ್ಯರ್ಥವಾಯಿತು.



ಮುಖ್ಯಮಂತ್ರಿಗಳು ಬರುವುದೇ ತಡವಾಗಿದ್ದರಿಂದ, ಎರಡು ಗಂಟೆ ತಡವಾಗಿ ಮೊದಲಾದ ಉದ್ಘಾಟನಾ ಸಮಾರಂಭ, ನಾಡಗೀತೆ ಮತ್ತು ಹೆಚ್ಚೇವು ಕನ್ನಡದ ದೀಪದಿಂದ ಮೊಳಗಿ ಮುಖ್ಯಮಂತ್ರಿಗಳ ಮಾತುಗಳಿಂದ ಮೊದಲಾಯಿತು. ಹಾಗೆ ನೊಡಿದರೆ, ಶ್ರೀ ಸಿದ್ಧರಾಮಯ್ಯನವರು, ಏನೂ ರಾಜಕಾರಣ ಮಾತನಾಡಲೇ ಇಲ್ಲ. ತಮ್ಮ ಸರಕಾರ ಕನ್ನಡದ ಏಳಿಗೆಗೆ ಮಾಡಿದ ಕೆಲಸಗಳನ್ನು ನೆನೆದರು. ಅವರ ನಂತರದಲ್ಲಿ ಮಾತನಾಡಿದ ಹಿಂದಿನ ಸಮ್ಮೇಳನದ ಅಧ್ಯಕ್ಷರಾದ ಶ್ರೀ ರಾಮಚಂದ್ರ ಬರಗೂರು ಅವರು, ಕನ್ನಡಕ್ಕೆ ಏನೂ ಗಮನವನ್ನು ಶಿಕ್ಷಣ ಮಂತ್ರಿಗಳಾದ ಸೇಠ್ ಅವು ಕೂಡಲಿಲ್ಲವೆಂದು ಆಕ್ಷೇಪಿಸಿ, ಈಗ ದೇಶವೆಲ್ಲವೂ ಕೇಸರಿಕರಣವಾಗಿ ಅಸಹಿಷ್ಣುತೆ, ಕೋಮುವಾದದಿಂದ ತುಂಬಿದೆ. ದೇಶ ಗಂಡಾಂತರದ ಸುಳಿಯಲ್ಲಿ ಇದೆ ಎಂದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಶ್ರೀ ಚಂಪಾರವರು ಮಾತನಾಡಿ, ನಮ್ಮ ಸಂವಿಧಾನದಲ್ಲಿರುವ ಸ್ವಾತಂತ್ರ್ಯ–ಸಮಾನತೆ–ಸಮಭಾವ–ನ್ಯಾಯ ಮುಂತಾದವುದಕ್ಕೆಲ್ಲ ಕಂಟಕ ಒದಗೋ ಸ್ಥಿತಿ ಬರುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ – ವೈಚಾರಿಕತೆ ಮೇಲೆ ನಡೆಯುತ್ತಿರುವ ಧಾಳಿಗಳನ್ನು ಪ್ರಶ್ನಿಸಿದರೆ ಅದು ರಾಷ್ಟ್ರದ್ರೋಹ ಎಂಬ ಅಪರಾಧಗಳು ಸೃಷ್ಠಿಯಾಗುತ್ತಿದೆ. ಏನೋ ನಮಗೆ ಕಾದಿದೆ ಅನ್ನುವಂಥಾ ಫ್ಯಾಸಿಸ್ಟ್ ವಾತಾವರಣ ಸೃಷ್ಟಿಯಾಗುತ್ತಿದೆ ಎಂದರು. ಕನ್ನಡವನ್ನು ಕಾಪಾಡಬೇಕಾದರೆ ಪ್ರಾದೇಶಿಕ ಪಕ್ಷಕ್ಕೆ ಮತ ಹಾಕಬೇಕೆಂದರು. ಹಿಂದಿ ಸಾಮ್ರಾಜ್ಯ ಶಾಹಿಯಿಂದ ಅಪಾಯವಿದೆ ಕನ್ನಡದ ನಿಲುವು ತಾಳದೆ ಇರುವ ಶಿಕ್ಷಣ ಮಂತ್ರಿಗಳಾದ ಶ್ರೀ ಸೇಠ್‌ರವರನ್ನು ಆ ಪದದಿಂದ ತೆಗೆದುಹಾಕಬೇಕೆಂದರು.

ಶತಮಾನೋತ್ಸವ ಸಭಾಂಗಣದಲ್ಲಿ ನಡೆದ, ಅಲಕ್ಷಿತ ಸಮುದಾಯಗಳನ್ನು ಕುರಿತ ಸಮಾವೇಶದಲ್ಲಿ ಮಾತನಾಡಿದ ಎಲ್ಲ ಬರಹಗಾರರೂ, ದಲಿತ ಮತ್ತು ಇತರ ವರ್ಗಗಳಿಗೆ ಈ ಸಮಯದಲ್ಲಿ ಅನ್ಯಾಯವಾಗಿದೆ ಎಂದರು. ಒಬ್ಬರಂತೂ ಮಹಿಷಾಸುರ ಒಬ್ಬ ದಲಿತ, ಅವನನ್ನು ಹೀನಾಯಗೊಳಿಸಿದ ಕಥೆಯೇ ಮಹಿಷಾಸುರ ಮರ್ದನ ಎಂದರು. ಪ್ರಾ. ಭಗವಾನ್ ಅವರು ಮಾತನಾಡಿ, ಇಂದಿನ ಕೋಮುವಾರು ವಾತಾವರಣದಲ್ಲಿ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರುತ್ತಿದೆ. ಹಿಂದೆ ಮನು ನೀತಿಶಾಸ್ತ್ರದಲ್ಲಿ ಹಾಗೂ ರಾಮಾಯಣದಲ್ಲಿ ಶೂದ್ರರನ್ನು ವಂಚಿತರಾಗಿ ಮಾಡುವುವ ಕೆಲಸವೇ ನಡೆದಿದೆ. ಇಂತಹ ರಾಮನಿಗೆ ಮಂದಿರ ನಿರ್ಮಾಣ ಮಾಡಿದರೆ ಅದು ದಲಿತ ಜನಾಂಗವನ್ನು ಮತ್ತೂ ಹಳಿದಂತಾಗುತ್ತದೆ ಎಂದರು. ಧರ್ಮ ಮತ್ತು ಮತಗಳಿಗೆ ಅಂತರವಿದೆ. ಮತ ಎಂದರೆ ಅಭಿಪ್ರಾಯ, ಧರ್ಮ, ಧೃ ಧಾತುವಿನಿಂದ ಬಂದಿದ್ದು. ದೃಢ ವಾದುದೆಂದರು. ಸಮಾವೇಶದಲ್ಲಿ ನೆರೆದಿದ್ದ ಅನೇಕರು, ಈ ವಿಷಯಾಂತರದ ಬಗ್ಗೆ ಪ್ರತಿಭಟನೆ ಮಾಡಿದರು. ಎರಡನೆಯ ದಿನ 83 ಜನರಿಗೆ ಸನ್ಮಾನ ಮಾಡಲಾಯಿತು. ದೇವೇಗೌಡರು ಎರಡು ಗಂಟೆಗಳಷ್ಟು ತಡವಾಗಿ ಬಂದಿದ್ದಲ್ಲದೆ, ಸನ್ಮಾನಕ್ಕೆ ಮುಂಚಿತವಾಗಿಯೇ ಒಂದೂವರೆ ಗಂಟೆ ರಾಜಕಾರಣದ ಮೇಲೆ ಭಾಷಣ ಬಿಗಿದು, ಎಲ್ಲರಿಗೂ ಸನ್ಮಾನ ಮಾಡದೆಯೇ ಹೊರಟು ಬಿಟ್ಟರು. ಇವರು ಬಂದಿದ್ದೇ ತಮ್ಮ ಭಾಷಣ ಬಿಗಿಯಲು ಎಂದು ಯಾರಿಗೂ ಅನುಮಾನ ಉಳಿಯಲಿಲ್ಲ.

ಕಲಾಮಂದಿರದಲ್ಲಿ ನಡೆದ ಕವಿ ಸಮ್ಮೇಳನದಲ್ಲಿಯೂ ಇದೇ ರೀತಿಯ ಅಭಿಪ್ರಾಯಗಳು ಮೂಡಿಬಂದವು. ಒಬ್ಬ ಕವಯತ್ರಿಯಂತೂ ತಮ್ಮ ಕವನ ನಾನೂ ಗೌರಿ'ಯಲ್ಲಿ, ಚಡ್ಡಿಯವರೇ ಪನ್ಸಾರೆ, ಕಲ್ಬುರ್ಗಿ, ಗೌರಿ ಲಂಕೇಶ್, ಮಹಾತ್ಮಗಾಂಧಿಯವರನ್ನು ಕೊಂದಿದ್ದು ಎಂದು ಸಾರಿ ಬಿಟ್ಟರು. ಇವರೇ SIT ಯಲ್ಲಿ ಇರತಕ್ಕವರು ಅನ್ನುವ ಸಂದೇಹ ಯಾರಿಗೂ ಉಳಿಯಲಿಲ್ಲ. ಕವನಗಳ ಗುಣಮಟ್ಟ ಹೊಗಳುವಂತಹದೇನೂ ಇರಲಿಲ್ಲ. ಜಯವಂತ ಕಾಡದೇವರ ಮಾತುಗಳು ಎಲ್ಲರ ಚಪ್ಪಾಳೆಗಳನ್ನು ಗಿಟ್ಟಿಸಿತು. ಆದರೆ, ಮುಖ್ಯ ಮಂಟಪದಲ್ಲಿ ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಕವಿ ಸಮ್ಮೇಳನದಲ್ಲಿ ತುಸು ಕೇಳುವಂತಹ ಕವನಗಳೂ ಕೇಳಿಬಂದವು. ಕವಿ ಜಯಂತ ಕಾಯ್ಕಿಣಿಯವರ ಆಶಯ ಮಾತುಗಳು ಕವಿ ಹೇಗೆ ಜನತೆಯ ಆಶಯಗಳಿಗೆ ಸ್ಪಂದಿಸಬೇಕು ಎನ್ನುವದಾಗಿತ್ತು. ಆದರೆ ಸಿದ್ಧಲಿಂದಪಟ್ಟಣಶೆಟ್ಟಿಯವರ ಅಧ್ಯಕ್ಷ ಭಾಷಣದಲ್ಲಿ ಮತ್ತೆ ರಾಜಕೀಯ ಮೂಡಿಬಂತು.

ಕಡೆಯ ದಿನ ಅಧ್ಯಕ್ಷರೊಡನೆ ಸಂವಾದದಲ್ಲಿ ಪ್ರಶ್ನೆಗಳು ಚಿಕ್ಕದಾದರೂ ಪಾಟೀಲರು ಉದ್ದುದ್ದು ಉತ್ತರಗಳನ್ನು ಕೊಡುತ್ತ ಹೋಗಿದ್ದು, ಕೇಳುಗರ ತಾಳ್ಮೆಯನ್ನು ಪರೀಕ್ಷೆ ಮಾಡುತ್ತಿತ್ತು. ಒಬ್ಬರು ಕೇಳಿದ ಪ್ರಶ್ನೆ ಇಂತಿದೆ. 'ನೀವೇ ಮೊದಲು ಸಾಹಿತ್ಯ ಸಮ್ಮೇಳನಗಳನ್ನು ಬೈದು, ಅದರಲ್ಲಿ ಭಾಗವಹಿಸುವುದು ಅನರ್ಥವೆಂದು' ಹೇಳಿದವರು. ಇಂದೇಕೆ ನೀವೇ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುತ್ತಿದ್ದೀರಿ?

ಅದಕ್ಕೆ ಏನೋ ಉತ್ತರ ಹೇಳಿದ ಪಾಟೀಲರನ್ನು ಕನ್ನಡಿಗರು ಮರೆತಿಲ್ಲ. ಇವರೇ ಅಲ್ಲವೇ ಮಂಗಳೂರಿನಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದಾಗ ತಾವೇ ಸಮಾನಾಂತರವಾಗಿ ಮೈಸೂರಿನಲ್ಲಿ ಬೇರೆಯೇ ಸಮ್ಮೇಳನ ನಡೆಸಿದ್ದು. ಬೇಂದ್ರೆಯವರ ನಾಕುತಂತಿ ಕವನಕ್ಕೆ ಜ್ಞಾನಪೀಠ ಪ್ರಶಸ್ತಿ ದೊರೆತಾಗ, ಧಾರವಾಡದಲ್ಲಿ ಎಣ್ಣೆಯ ಮೇಲೆ ಚಪ್ಪಲಿಯನ್ನಿಟ್ಟು ಮೆರವಣಿಗೆ ಮಾಡಿದ್ದು. ತಾನು ವೀರಶೈವ ಸಮುದಾಯವನ್ನು ಬೆಂಬಲಿಸುವುದಿಲ್ಲ. ಆದರೆ ಲಿಂಗಾಯುತ ಸಮುದಾಯವನ್ನು ಬೆಂಬಲಿಸುತ್ತೇನೆ ಎಂದರು ಪಾಟೀಲರು. ಇವರು ಎಂದೂ ಕನ್ನಡಿಗರನ್ನು ಒಡೆಯುವ ಕೆಲಸದಲ್ಲೇ ತೊಡಗಿದ ಸಾಹಿತಿ ಎಂದು ಎಲ್ಲರೂ ಬಲ್ಲರು.

ಸಮಾರೋಪ ಸಮಾವೇಶದಲ್ಲಿ ಅನಂತಕುಮಾರರು ಸಾಹಿತ್ಯ ಸಮ್ಮೇಳನದಲ್ಲಿ ರಾಜಕಾರಣ ತರುವುದು ತಕ್ಕದ್ದಲ್ಲ. ಎಂದಾಗ ಪಾಟೀಲರು ಹಾಗಾದರೆ ನಾನು ಕೋಮುವಾರು ಪಕ್ಷಗಳಿಗೆ ಮತನೀಡಿ ಎಂದು ಹೇಳಬೇಕಿತ್ತೇ ಎಂದು ಪ್ರಶ್ನಿಸಿದರು. ರಾಮಮಂದಿರದ ಮೇಲೆ ಅವರು ಮಾಡಿದ ಟೀಕೆಗೆ ಪ್ರತಿಯಾಗಿ, ಕೆಲವರು ಪ್ರತಿಭಟನೆ ಮಾಡಿದ್ದು, ಅವರುಗಳನ್ನು ಪೋಲೀಸರು ಹೊರಮಾಡಿದರು ಈ ಸಮ್ಮೇಳನದಿಂದ ಕನ್ನಡಿಗರು ಕಲಿಯಬೇಕಾದುದು, ತಕ್ಕವರಲ್ಲದವರನ್ನು ಸಮ್ಮೇಳನದ ಅಧ್ಯಕ್ಷರಾಗಿ ಆರಿಸಬಾರದು ಎಂದು. ಸಮ್ಮೇಳನಕ್ಕೆ ಬಂದ ಬಹಳ ಮಂದಿಯ ಅನಿಸಿಕೆ ಮೈಸೂರು ಸಿದ್ಧರಾಮಯ್ಯನವರ ಕ್ಷೇತ್ರವಾದುದರಿಂದ, ಅವರ ವಿಚಾರಧಾರೆಗೆ ಹೊಂದತಕ್ಕವರನ್ನೇ, ಈ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕೆ ಕರೆಯಲಾಗಿತ್ತು ಎಂದು. ಇದರಿಂದಾಗಿ ಭಾಗವಹಿಸಿದ ಸಾಹಿತಿಗಳ ಆಶಯಗಳೂ ಅಂತೆಯೇ ಇದ್ದವು ಎಂದು.

ಕನ್ನಡದ ಸಾಹಿತ್ಯ ಸಮ್ಮೇಳನವನ್ನು ರಾಜಕೀಯ ಮತ್ತು ರಾಜಕಾರಣಿಗಳಿಂದ ದೂರವಿಡಬೇಕೆಂದರು. ಕಡೆಯದಾಗಿ, ಸಮ್ಮೇಳನದಲ್ಲಿ ಸಾಹಿತಿಗಳ ನುಡಿ–ನಡೆವಳಿಕೆ ಎಂತಿದ್ದರೂ ಶ್ರೀ ಮನು ಬಳಿಗಾರರ ಮುಂದಾಳುತನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಅಧಿಕಾರಿ ನೌಕರರು, ಬಹು ಶಿಸ್ತಿನಿಂದ, ಎಲ್ಲರ ಬಗ್ಗೆ ಮುತುವರ್ಜಿ ವಹಿಸಿ, ಎಲ್ಲರಿಗೂ ಆತಿಥ್ಯದ ವ್ಯವಸ್ಥೆ ಮಾಡಿದುದು ಹೊಗಳುವಂತಹದು. ಸುಮಾರು ಹತ್ತು ಸಾವಿರಕ್ಕೂ ಮಿಕ್ಕ ಹೊರಗಿನಿಂದ ಬಂದ ಕನ್ನಡಿಗರ ಬಗ್ಗೆ ಅವರುಗಳು ತೋರಿದ ಆದರ ಎಂದೂ ಮರೆಯುವಂತಹದ್ದಲ್ಲ.

# ಆದರ್ಶ ಶಿಕ್ಷಕ, ಸಾಹಿತಿ ಬಿ. ಎಸ್. ಕುರ್ಕಾಲ್



ಡಾ. ಜ್ಯೋತಿ ಸತೀಶ್

ಮುಂಬಯಿ ಕನ್ನಡಿಗರ ಸಾಂಸ್ಕೃತಿಕ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಸಾಹಿತಿ ಬಿ. ಎಸ್. ಕುರ್ಕಾಲರದು ಅಪರೂಪದ ವ್ಯಕ್ತಿತ್ವ. ಬಿ.ಎಸ್.ಕುರ್ಕಾಲ್ ಎಂದು ನಾಮಾಂಕಿತರಾಗಿರುವ ಭುಜಂಗ ಶೆಟ್ಟಿ ಕುರ್ಕಾಲ್ ಅವರು ಕವಿಯಾಗಿ, ಅಂಕಣಕಾರರಾಗಿ, ನಾಟಕಕಾರರಾಗಿ, ಆದರ್ಶ ಶಿಕ್ಷಕರಾಗಿ, ಸಂಘಟಕರಾಗಿ ಮುಂಬೈಯಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಲವರ್ಧನೆಗೆ ತಮ್ಮನ್ನು ಅವಿರತವಾಗಿ ತೊಡಗಿಸಿಕೊಂಡಿದ್ದರು. ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿ ಹೆಸರು ಮಾಡಿದವರು ಬಿ. ಎಸ್. ಕುರ್ಕಾಲ್.

'ಭಾವಗೀತೆಗಳ ಕವಿ' ಎಂದೇ ಪ್ರಸಿದ್ಧರಾಗಿರುವ ಬಿ. ಎಸ್. ಕುರ್ಕಾಲ್ ಅವರು 1932ರ ಜುಲೈ 17ರಂದು ಉಡುಪಿ ತಾಲೂಕಿನ ಕುಂಜರುಗಿರಿಯಲ್ಲಿ ಗಣಪಯ್ಯ ಶೆಟ್ಟಿ ಮತ್ತು ಲಕ್ಷ್ಮಿ ಶೆಟ್ಟಿ ದಂಪತಿಗಳ ಸುಪುತ್ರರಾಗಿ ಜನಿಸಿದ್ದರು. ಕುರ್ಕಾಲರದು ವಿದ್ಯಾವಂತ ಕುಟುಂಬ. ಕುರ್ಕಾಲರ ತಂದೆ ಕನ್ನಡದ ಹಿರಿಯ ಕವಿ ಪಂಜೆಯವರ ಶಿಷ್ಯರಾಗಿದ್ದರು. ಮುಂದೆ ಶಿಕ್ಷಕರಾಗಿ ವೃತ್ತಿಯನ್ನು ಆರಂಭಿಸಿದ್ದರು. ಹಾಗಾಗಿ ಸಹಜವಾಗಿಯೇ ಕುರ್ಕಾಲರೂ ಕೂಡ ಪಂಜೆ ಮಂಗೇಶರಾಯರು ಮತ್ತು ಉಳ್ಳಾಲ ಮಂಗೇಶರಾಯರ ಮೆಚ್ಚಿನ ಶಿಷ್ಯರಾಗಿದ್ದರು. ಅವರೊಳಗೆ ಹುದುಗಿದ್ದ ಪ್ರತಿಭೆಯನ್ನು ಹೊರತೆಗೆದು ಅದಕ್ಕೆ ಒಂದು ರೂಪವನ್ನು ಕೊಟ್ಟವರು ಈ ಗುರುಗಳೇ ಎಂದು ನಮ್ರತೆಯಿಂದ ಸ್ಮರಿಸಿಕೊಂಡಿದ್ದಾರೆ. ವೃತ್ತಿಯಲ್ಲಿ ತಂದೆಯ ದಾರಿಯನ್ನು ಹಿಡಿದ ಕುರ್ಕಾಲರು ಅದರಲ್ಲಿ ತೃಪ್ತಿಯನ್ನು ಕಂಡುಕೊಂಡವರು. ಮೆಟ್ರಿಕ್ ತರಬೇತಿ ಪಡೆದು ಶಿಕ್ಷಕರಾದರು.

ಕುರ್ಕಾಲರ ತಂದೆ ಗಣಪಯ್ಯ ಶೆಟ್ಟರು ಶಿಕ್ಷಕ ವೃತ್ತಿಯ ಜೊತೆಗೆ ಸಮಾಜ ಸೇವೆಯಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡವರು. ತಮ್ಮ ಆದರ್ಶ ಮೌಲ್ಯದಿಂದ ಕುರ್ಕಾಲು ಗ್ರಾಮದ ಸರ್ವತೋಮುಖ ಪ್ರಗತಿಗೆ ಕಾರಣಿಭೂತರಾದರು. ಇವರ ಗರಡಿಯಲ್ಲಿ ಕಲಾವಿದ ಕೆ.ಕೆ.ಹೆಬ್ಬಾರರಂತಹ ಹಲವರು ಧೀಮಂತ ವ್ಯಕ್ತಿಗಳು ಮೂಡಿಬಂದಿದ್ದಾರೆ. ಇಂತಹ ಸುಸಂಸ್ಕೃತ ಹಿನ್ನೆಲೆಯಿಂದ ಬೆಳೆದು ಬಂದ ಬಿ. ಎಸ್. ಕುರ್ಕಾಲರಿಗೆ ಅವರ ತಂದೆಯೇ ಆದರ್ಶ ಗುರುವಾಗಿದ್ದರು. ಹೀಗೆ ಕುರ್ಕಾಲರು ಬಾಲ್ಯದಿಂದಲೇ ತಂದೆಯ ಒಡನಾಟದಿಂದ ಆದರ್ಶ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದಾರೆ. ಆರಂಭದಲ್ಲಿ ಕುಂಜಾರುಗಿರಿಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಕಾರಣಾಂತರದಿಂದ ಮುಂಬಯಿಗೆ ಆಗಮಿಸಿದ ಕುರ್ಕಾಲರು ವಡಾಲದ ಎನ್.ಕೆ.ಇ.ಎಸ್ ಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಆರಂಭಿಸಿದರು. ಅದರ ಜೊತೆಗೆ ಗುರುನಾರಾಯಣ ರಾತ್ರಿ ಶಾಲೆಯಲ್ಲೂ ದುಡಿದಿದ್ದಾರೆ. ಶಿಕ್ಷಕ ವೃತ್ತಿಯ ಜೊತೆಗೆ ಬರವಣಿಗೆಯನ್ನು ರೂಢಿಸಿಕೊಂಡರು.

**ಸ್ನೇಹಮಯ ವ್ಯಕ್ತಿತ್ವದ ಬಿ. ಎಸ್. ಕುರ್ಕಾಲರು ಮುಂಬಯಿ ಕನ್ನಡಿಗರ ಸಾಂಸ್ಕೃತಿಕ ಬದುಕಿನಲ್ಲಿ ಹಾಸುಹೊಕ್ಕಾಗಿದ್ದರು. 'ಭಾವಗೀತೆಗಳ ಕವಿ' ಎಂದೇ ಪ್ರಸಿದ್ಧರಾಗಿರುವ ಬಿ. ಎಸ್. ಕುರ್ಕಾಲರ ಸಾಹಿತ್ಯ ವೈವಿಧ್ಯಮಯವಾದುದು. ಅವರು ಎಲ್ಲ ಕ್ಷೇತ್ರಗಳಲ್ಲೂ ಕೈಯಾಡಿಸಿದವರು. ಶಿಕ್ಷಕರಾಗಿ, ಶಿಶುಸಾಹಿತಿಗಳಾಗಿ, ಸಂಘಟಕರಾಗಿ, ಅಂಕಣಕಾರರಾಗಿ ಪತ್ರಿಕಾ ಸಂಪಾದಕರಾಗಿ ಹೊರನಾಡಿನಲ್ಲಿದ್ದುಕೊಂಡು, ಕನ್ನಡ ಸೇವೆಯನ್ನು ಮಾಡುತ್ತಿದ್ದ ಕುರ್ಕಾಲರ ಬದುಕು ಬರಹ ಎಲ್ಲರಿಗೂ ಮಾದರಿಯಾಗಿತ್ತು. ಇಂತಹ ಮಹಾನ್ ಚೇತನವನ್ನು ನಾವಿಂದು ಕಳೆದುಕೊಂಡಿದ್ದೇವೆ. ಅವರ ಸವಿನೆನಪಿಗಾಗಿ ಈ ಲೇಖನದ ಮೂಲಕ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ.**



ಶಿಷ್ಯರೊಂದಿಗೆ ತಾವೂ ಬೆಳೆದರು. ವಿದ್ಯಾರ್ಥಿಗಳ ಮೆಚ್ಚಿನ ಶಿಕ್ಷಕರಾಗಿ ಹೆಸರು ಮಾಡಿದ್ದಾರೆ. ಮಕ್ಕಳೊಂದಿಗೆ ಮಕ್ಕಳಂತೆಯೇ ಆಡಿ ನಲಿದವರು. ವಿದ್ಯಾರ್ಥಿಗಳು ತಪ್ಪು ಅಷ್ಟೇ ಕಠೋರವಾಗಿ ಖಂಡಿಸುತ್ತಿದ್ದರು. ಅವರೇ ಒಂದೆಡೆ ಹೇಳುವಂತೆ "ಎಲ್ಲಿ ಪೆಟ್ಟು ಬೀಳಬಾರದೋ ಅಲ್ಲಿ ಪೆಟ್ಟು ಬಿದ್ದರೆ ಹುಡುಗ ನಮ್ಮ ಕೈಯಿಂದ ಜಾರಿ ಹೋಗುತ್ತಾನೆ. ಯಾವಾಗ ಪೆಟ್ಟು ಬೀಳಬೇಕೋ ಆಗ ಬಿದ್ದರೆ ದಾರಿ ತಪ್ಪುವನು ಹಿಂತಿರುಗಿ ಬರುತ್ತಾನೆ" ಎಂಬ ನುಡಿಯನ್ನು ನಂಬಿ ನೆಚ್ಚಿ ನಡೆದವರು. ಡಾ. ಜಿ. ಎನ್. ಉಪಾಧ್ಯ ಅವರು 'ಶಿಕ್ಷಕರೆಂದರೆ ಹೀಗಿರಬೇಕು ಎಂದು ಹೆಸರೆತ್ತಿ ಹೇಳಬಹುದಾದರು ಭುಜಂಗ ಶೆಟ್ಟಿ ಕುರ್ಕಾಲ್ ಅವರು' ಎಂದಿರುವುದರಲ್ಲಿ ಉತ್ಪ್ರೇಕ್ಷೆ ಇಲ್ಲ. ಮನೆಯಲ್ಲಿ ಸಂಗೀತದ ವಾತಾವರಣವಿದ್ದುದರಿಂದ ಸಹಜವಾಗಿಯೇ ಹಾಡುಗಾರಿಕೆಯನ್ನು ಕರಗತಮಾಡಿಕೊಂಡಿದ್ದಾರೆ. ಕುರ್ಕಾಲರ ಹಾಡುಗಾರಿಕೆಗೆ ಎಲ್ಲರೂ ಮನಸೋತವರೇ. ಯಾವುದೇ ಭಾವಗೀತೆಯಾಗಲಿ, ಯಕ್ಷಗಾನ ಅಥವಾ ನಾಟಕದ ಹಾಡುಗಳನ್ನಾಗಲಿ ಲೀಲಾಜಾಲವಾಗಿ ಹಾಡುತ್ತಿದ್ದರು.

ಸ್ನೇಹಮಯ ವ್ಯಕ್ತಿತ್ವದವರಾದ ಕುರ್ಕಾಲರು ಎಲ್ಲರನ್ನೂ ಆತ್ಮೀಯಭಾವದಿಂದ ಮಾತನಾಡಿಸುತ್ತಿದ್ದರು. ಬಹುಮುಖ ಪ್ರತಿಭಾ ಸಂಪನ್ನರಾದ ಸರಳ, ಸಜ್ಜನರಾಗಿದ್ದ ಕುರ್ಕಾಲರದು ಅಭ್ಯಾಸಶೀಲವಾದ ಮನಸ್ಸು. ಮಕ್ಕಳೆಂದರೆ ಕುರ್ಕಾಲರಿಗೆ ಪಂಚಪ್ರಾಣ. ಮಕ್ಕಳಿಗಾಗಿ ಶಿಶುಸಾಹಿತ್ಯವನ್ನು ರಚಿಸಿದರು. ಸಾಹಿತ್ಯ ಪ್ರಕಾರವಾದ ಶಿಶು ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಕುರ್ಕಾಲರು ನೀಡಿದ ಕೊಡುಗೆ ಅಪಾರವಾದುದು. ತಮ್ಮ ಶಿಕ್ಷಕ ವೃತ್ತಿಯಲ್ಲಿ ಕಂಡುಂಡ ವೈವಿಧ್ಯಮಯವಾದ ಅನುಭವಗಳನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಪತ್ರಪುಷ್ಪದ ಸಂಪಾದಕರಾಗಿ ಅವರು ಬರೆದ ಮೌಲಿಕ ಬರೆಹಗಳು ಇಂದಿಗೂ ಪ್ರಸ್ತುತವಾಗಿದೆ. ಪ್ರಾಚೀನ ಪರಂಪರೆಯ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯದಲ್ಲಿಯೇ ಬೆಳೆದು ಪರಿಪಕ್ವವಾದ ಪಾಂಡಿತ್ಯವನ್ನು ಗಳಿಸಿಕೊಂಡಿರುವ ಕುರ್ಕಾಲರು ಸಮಕಾಲೀನ ಪ್ರಜ್ಞೆಗೂ ಮನವೊಲಿದು ಉದಾರ ಮನಸ್ಸಿನಿಂದ ನೂತನ ಪ್ರಯತ್ನವನ್ನು ಮತ್ತು ಪ್ರಯೋಗಗಳನ್ನು ಸ್ವಾಗತಿಸಿರುವುದನ್ನು ಅವರ ಕೃತಿಗಳಲ್ಲಿ ಕಾಣಬಹುದು.

ದೇಶದ ರಾಜಕೀಯ ಸ್ಥಿತ್ಯಂತರಗಳಲ್ಲೂ ಕುರ್ಕಾಲರಿಗೆ ಅತೀವ ಆಸಕ್ತಿ. ಎಲ್ಲೇ ರಾಜಕೀಯದ ಭಾಷಣ ನಡೆದರೂ ಕುರ್ಕಾಲರು ಪತ್ನಿಸಮೇತರಾಗಿ ತೆರಳುತ್ತಿದ್ದರು. ಕುರ್ಕಾಲರಿಗೆ ಕೃತಿಗಳಿಗೆ ಮೊದಲು ವಿಮರ್ಶೆ ಮಾಡುತ್ತಿದ್ದವರು ಅವರ ಧರ್ಮಪತ್ನಿ ಜಯಂತಿ ಅವರು. ಅವರಿಬ್ಬರ ನಡುವಿನ ಆತ್ಮೀಯವಾದ ಸಂಭಾಷಣೆಯನ್ನು ಓದಿದಾಗ ಮುದ್ದಣ ಮನೋರಮೆಯರ ನೆನಪನ್ನು ಬರಿಸುತ್ತದೆ. ತಮ್ಮ ಪತ್ನಿಯನ್ನು ಕಳೆದುಕೊಂಡಾಗ ಅತ್ಯಂತ ಶಾಂತ ಸ್ಥಿತಿಯಲ್ಲಿ

ಪರಿಸ್ಥಿತಿಯನ್ನು ಸಂಭಾಳಿಸಿಕೊಂಡು ಬಂದಿದ್ದಾರೆ. ಬೌದ್ಧಿಕವಾಗಿ ಪತ್ನಿ ಇಂದಿಗೂ ತನ್ನ ಜೊತೆ ಇದ್ದಾಳೆ ಎನ್ನುವುದನ್ನು ಭಾವಿಸಿಕೊಂಡು ಸಾಹಿತ್ಯ ಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಪರಿಗೆ ತಲೆಬಾಗಲೇಬೇಕು.

ಕುರ್ಕಾಲರದು ಸಮರಸದ ಜೀವನ. ಅವರ ನೆಮ್ಮದಿಯ ಬಾಳಿಗೆ ಅವರ ಧರ್ಮಪತ್ನಿಯ ಯೋಗದಾನವಿದೆ. ತನ್ನಲ್ಲಿ ಸಾಹಿತ್ಯಾಭಿರುಚಿಯ ಸೊಡರನ್ನು ಕುದುರಿಸಿದ ಧರ್ಮಪತ್ನಿಯ ಹೆಸರಿನಲ್ಲಿ ಮುಂಬಯಿಯ ಕನ್ನಡ ಬರಹಗಾರರಿಗಾಗಿ ಸಾಹಿತ್ಯ ಪ್ರಶಸ್ತಿಯೊಂದನ್ನು ಸ್ಥಾಪಿಸಿದರು. ಪ್ರಶಸ್ತಿ ಪ್ರದಾನ ಕಾರ್ಯವನ್ನು ಸಂಯೋಜಿಸಲು ಅವರು 1993ರಲ್ಲಿ 'ಲಕ್ಷ್ಮೀಛಾಯಾ ವಿಚಾರವೇದಿಕೆ'ಯನ್ನು ಮುಂಬಯಿಯಲ್ಲಿ ಹುಟ್ಟು ಹಾಕಿದರು. ಅನೇಕ ಸೃಜನಶೀಲ ಬರಹಗಾರರನ್ನು ಗುರುತಿಸಿ ಅವರಲ್ಲಿ, ಕನ್ನಡ ಕಟ್ಟುವ ಕ್ರಿಯೆಗಳಲ್ಲಿ ಪ್ರೋತ್ಸಾಹ ತುಂಬಿದರು. ಲಕ್ಷ್ಮೀಛಾಯಾ ವಿಚಾರವೇದಿಕೆಯ ಮೂಲಕ ಕೊಡಮಾಡುವ 'ಜಯಂತಿ ಕುರ್ಕಾಲ್' ಸಾಹಿತ್ಯ ಪ್ರಶಸ್ತಿ ಅವರ ಕನಸಿನ ಕೂಸಾಗಿದೆ.

ತಮ್ಮದೇ ಆದ ಲಕ್ಷ್ಮೀಛಾಯಾ ವಿಚಾರ ವೇದಿಕೆಯ ಮೂಲಕ ಮತ್ತು ಅಭಿಜಿತ್ ಪ್ರಕಾಶನದ ಮೂಲಕ ಅನೇಕ ಕೃತಿಗಳನ್ನು ಹೊರತಂದಿದ್ದಾರೆ. ಶ್ರಾವಣ ಲಹರಿ, ನನ್ನ ನಿನ್ನ ಅಂತರಂಗ, ಮೇವಾಡದ ಭಾಗ್ಯಲಕ್ಷ್ಮಿ, ರಾಗರಶ್ಮಿ, ಚಿಲಿಪಿಲಿ, ರಸಾಯನ, ಇದ್ದವರು ಇರುವವರು, ಹನಿ ಹನಿ ಇಬ್ಬನಿ ಮೊದಲಾದ ಮಹತ್ವದ ಕೃತಿ ಪುಷ್ಪವನ್ನು ಅವರು ಕನ್ನಡ ವಾಙ್ಮಯಕ್ಕೆ ನೀಡಿದ್ದಾರೆ. ಅಲ್ಲದೆ ಗಾಂದುರ್ಪೆಯಲ್ಲಿ ಗಣಪಯ್ಯ ಶೆಟ್ಟರು, ಯದುನಾಥ, ತುಳುನಾಡ ಕಟ್ಟುಕಟ್ಟಳೆಗಳು ಎಂಬ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಕಾಕನಕೋಟೆ ಮತ್ತು ಭೂತಯ್ಯನ ಮಗ ಅಯ್ಯು ಇದು ಅವರ ಅಮರ ಚಿತ್ರಕಥಾ ಮಾಲಿಕೆ. ಇವರ ಬಗ್ಗೆ ಈಗಾಗಲೇ ಡಾ. ಜಿ. ಎನ್. ಉಪಾಧ್ಯರವರ ಸಂಪಾದಕತ್ವದಲ್ಲಿ 'ಗಿರಿಜಾತ' ಎಂಬ ಅಭಿನಂದನ ಗ್ರಂಥ ಹೊರಬಂದಿದೆ. ದಿನೇಶ್ ಶೆಟ್ಟಿ ಅವರು ಕುರ್ಕಾಲರ ಬದುಕು ಬರಹವನ್ನು 'ಗಿರಿಕುಂಜರ' ಎಂಬ ನಾಮದಿಂದ ಕೃತಿಯನ್ನು ರಚಿಸಿದ್ದಾರೆ. ಕುರ್ಕಾಲರ ಸಾಹಿತ್ಯ ಅವರ ವ್ಯಕ್ತಿತ್ವದ ಪ್ರತಿಬಿಂಬ. ಅವರ ಸಾಹಿತ್ಯ ಸಾಧನೆಯನ್ನು ಗುರುತಿಸಿ ಕನ್ನಡ ಸಾಹಿತ್ಯ ಪರಿಷತ್ 'ಕನ್ನಡಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದು ಅಭಿಮಾನದ ಸಂಗತಿ. ಇದಲ್ಲದೆ ಅನೇಕ ಸಂಘ ಸಂಸ್ಥೆಗಳು ಇವರ ಪ್ರತಿಭೆಯನ್ನು ಗುರುತಿಸಿ ಸನ್ಮಾನಿಸಿವೆ. ಉಡುಪಿಯಲ್ಲಿ ಜರುಗಿದ 74ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಪರಿಷತ್ತಿನ ಗೌರವ. ಕಿನ್ನಿಗೋಳಿಯ 'ಅನಂತ ಪ್ರಕಾಶನ ಪ್ರಶಸ್ತಿ', ಮುಂಬಯಿ ಕರ್ನಾಟಕ ಸಂಘದ 'ಸಾಧನ ಶಿಖರ ಗೌರವ ಪ್ರಶಸ್ತಿ', ಅವರ 'ಚಿಲಿಪಿಲಿ' ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 2009ರ 'ವಸುದೇವ ಭೂಪಾಲಂ ಪ್ರಶಸ್ತಿ' ಲಭಿಸಿದೆ. 'ಗುರುನಾರಾಯಣ ಸಾಹಿತ್ಯ ಪ್ರಶಸ್ತಿ' ಬಿಲ್ಲವರ ಅಸೋಸಿಯೇಶನ್‌ನ ವತಿಯಿಂದ ದೊರಕಿದೆ. ಅವರ 77ರ ಹುಟ್ಟುಹಬ್ಬದ ಅಂಗವಾಗಿ ಹಳೆ ವಿದ್ಯಾರ್ಥಿ ಬಳಗ ಒಟ್ಟುಗೂಡಿ ಕುರ್ಕಾಲರಿಗೆ ಅದ್ದೂರಿಯ ಅಭಿನಂದನ ಸಮಾರಂಭವನ್ನು ಏರ್ಪಡಿಸಿತ್ತು. ಅಂತರಾಷ್ಟ್ರೀಯ ಖ್ಯಾತಿಯ ಕಲಾವಿದ ಕೆ. ಕೆ. ಹೆಬ್ಬಾರರು ಕುರ್ಕಾಲರಿಗೆ ಶುಭ ಹಾರೈಸಿದ್ದನ್ನು ಇಲ್ಲಿ ಉಲ್ಲೇಖಿಸಲೇಬೇಕು.

"ಕಾರಂತ ಕಯ್ಯಾರರಂತೆ ನೀನಾಗಬೇಕಿಲ್ಲ
ಕಾಳಿಂಗ, ಹೆಬ್ಬಾರರಂತೆಯೂ ನೀನಾಗಲೆಳಸುವುದಿಲ್ಲ
ನೀನಾಗಿ ನಿನ್ನತನವನ್ನು ಬೆಳೆಸಿ ಬಾಳಯ್ಯ
ನಾ ಪೇಳ್ವೆ ಹರಸಿ ನಿನಗದುವೆ ಒಳಿತಯ್ಯಾ"

ಕುರ್ಕಾಲರ ಹೆಚ್ಚಿನ ಕವಿತೆಗಳು ನವೋದಯ ಕಾವ್ಯಗಳಾಗಿವೆ. ನವೋದಯದ ಸಂದರ್ಭದಲ್ಲಿ ಭಾವಗೀತೆಯನ್ನು ತುತ್ತತುದಿಯನ್ನು ಏರಿದ್ದು ನಮಗೆಲ್ಲರಿಗೂ ತಿಳಿದ ಸಂಗತಿ. ಈ ಜಾಡಿನಲ್ಲಿಯೇ ಕುರ್ಕಾಲರು ತಮ್ಮ ಕವಿತೆಗಳನ್ನು ರಚಿಸಿದರು. ಮುಂದೆ ಭಾವಗೀತೆಗಳ ಕವಿ ಎಂದೇ ಪ್ರಸಿದ್ಧರಾದರು. ಆಧುನಿಕತೆಯನ್ನು ಒಪ್ಪಿಕೊಂಡ ಕುರ್ಕಾಲರ ಕವಿತೆಗಳ ವಸ್ತು ನವೀನ. ಅವರು ಪ್ರತಿಯೊಂದು ವಸ್ತುವನ್ನು ನೋಡುವ ಬಗೆಯಲ್ಲಿ ಹೊಸತನವುಂಟು. ಅವರ ಅನೇಕ ಕವನಗಳಲ್ಲಿ ಭಾವ, ಬಂಧ, ಕಲ್ಪನೆ ವಿಚಾರಗಳಲ್ಲಿ ಹೊಸ ಕಾಲದ ಎರಕ ಮೂರ್ತಗೊಂಡಿದೆ. ಕಾವ್ಯವೇ ಕುರ್ಕಾಲದ ಪ್ರಮುಖ ಅಭಿವ್ಯಕ್ತಿಯಾಗಿದೆ. 'ನನ್ನ ನಿನ್ನ ಅಂತರಂಗ' ಕುರ್ಕಾಲರ ಚೊಚ್ಚಲ ಕವನ ಸಂಕಲನ. ಕುರ್ಕಾಲರ ಕವನ ರಸವಂತಿಕೆಯಿಂದ ಕೂಡಿದ್ದು, ರಸಿಕರ ಹೃದಯವನ್ನು ತಟ್ಟುತ್ತದೆ. ಮನವನ್ನು ಮುಟ್ಟುತ್ತದೆ. ಅವರ 'ಶ್ರಾವಣ ಲಹರಿ'ಯ ಒಂದೊಂದು ಕವನವು ಈ ಮಾತಿಗೆ ಸಾಕ್ಷಿ ನುಡಿಯುತ್ತದೆ. "ಗೇಯತೆ, ನಾದಮಾಧುರ್ಯ, ನಿಮ್ಮ ಕವನಗಳ ಹೆಚ್ಚುಗಾರಿಕೆ. ನಾವು ಕಾಣುವ ಬದುಕಿನ ವ್ಯಂಗ್ಯ, ಸಾಮಾಜಿಕ ದುರಂತ, ಇತಿಹಾಸದಲ್ಲಿ ಕಂಡ ಹಿಂಸೆ, ಸಾಮಾಜಿಕ ದುರಂತರಿಂದ ನೊಂದು ಬರೆದ 'ನಮಗೆ ದುಃಖವಿಲ್ಲ' ಇಂತಹ ಕವನಗಳು 'ರಾಗರಶ್ಮಿ'ಯ ಮಿರುಗನ್ನು ಹೆಚ್ಚಿಸಿವೆ" ಎಂದು ವ್ಯಾಸರಾಯ ಬಲ್ಲಾಳ ಅವರು ಕೊಂಡಾಡಿದ್ದು ಅವಲೋಕನೀಯವಾಗಿದೆ. ಕುರ್ಕಾಲರ ಅನೇಕ ಕವನಗಳಲ್ಲಿ ಬೇಂದ್ರೆ ಪ್ರಭಾವ ಬೀರಿದ್ದಾರೆ. ಕುರ್ಕಾಲರ ಭಾಷೆ, ಭಾವ ಮನೋಹರವಾದುದು. "ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು ಎಂದು ಕುವೆಂಪು ಅವರು ಹಾಡಿದ್ದುಂಟು. ಅಂತೆಯೇ ನಮ್ಮ ಕುರ್ಕಾಲರು ಹಾಡಿದರೆಂದರೆ ಮಕ್ಕಳ ಮೈಯಲ್ಲಿ ಮಿಂಚಿನ ಹೊಳೆ ತುಳುಕಾಡುವುದು" ಎಂದಿದ್ದಾರೆ ಬಿ. ಎ. ಸನದಿಯವರು. ವಾಸ್ತವಕ್ಕೆ ತೀರ ಹತ್ತಿರವಾಗುವ ಚಿಂತನಪರ ಸರಳ ಅಭಿವ್ಯಕ್ತಿ ಕುರ್ಕಾಲರ ಕ್ರಿಯಾಶಕ್ತಿಯಾಗಿದೆ. ಕುರ್ಕಾಲರ ಎಲ್ಲ ಕವನಗಳು ಓದಿದಾಗ ಮನಸ್ಸಿಗೆ ಮುದವನ್ನು ನೀಡುತ್ತದೆ. ನಮ್ಮನ್ನು ಚಿಂತಿಸುವಂತೆ ಪ್ರೇರೇಪಿಸುತ್ತದೆ. ಸಮಾಜದಲ್ಲಿಯ ಕಪಟ, ಮೋಸಗಳಿಗೆ ಹಿಂಬಾಗಿಲ ದಾರಿ ತೋರಿಸುವಂತೆ ಪ್ರೇರಣೆಯನ್ನು ನೀಡುತ್ತದೆ. "ರಾಗರಶ್ಮಿ ಹೊಂದಿರುವ ಮೂವತ್ತು ಕವನಗಳೂ ವಾಚನೀಯವೂ ಮನನೀಯವೂ ಆಗಿವೆ. ಕವಿಯ ಹೃದಯಭಾವನೆಗಳು ಸುಖ ದುಃಖ ಮಿಶ್ರ ಚಿಂತನೆಗಳನ್ನು ಆಕರ್ಷಕವಾಗಿಸಿವೆ. 'ರಾಗರಶ್ಮಿ' ಎಂಬ ಹೆಸರೇ ಕಾವ್ಯದ ಯೋಗ್ಯತೆಯನ್ನು ಸೂಚಿಸುತ್ತದೆ" ಎಂದು ಅಭಿಮಾನ ವ್ಯಕ್ತಪಡಿಸಿದ ಪ್ರಸಿದ್ಧ ಕವಿ ಕಯ್ಯಾರ ಕಿಞ್ಞಣ್ಣ ರೈಅವರ ಮಾತು ಅಕ್ಷರಶಃ ಸತ್ಯವಾಗಿದೆ. "ಸಮಕಾಲೀನ ಸಂದರ್ಭ ಮತ್ತು ದುರಂತಗಳಿಗೆ, ಘಟನೆಗಳಿಗೆ ನಿಮ್ಮ ಅಂತಃಕರಣ ಸ್ಪಂದಿಸಿ ಕವಿತೆಗಳಾಗಿ ಮೈ ತಳೆದಿರುವುದು ಹೃದಯ ಸ್ಪರ್ಶಿಯಾಗಿದೆ" ಎಂದು ನಾಡೋಜ ಹಂಪನಾ ಅವರು ಕುರ್ಕಾಲರ ಕವಿತೆಗಳನ್ನು ಓದಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಕವನ ರಚನೆಯ ಜೊತೆಗೆ ಕುರ್ಕಾಲರದ್ದು ಗದ್ಯ ಸಾಹಿತ್ಯದಲ್ಲೂ ಎತ್ತಿದ ಕೈ. ಅವರ 'ರಸಾಯನ' ಕೃತಿ ಇದಕ್ಕೆ ಉತ್ತಮ ನಿದರ್ಶನ. ವ್ಯಕ್ತಿಚಿತ್ರ ರಚನೆಯಲ್ಲಿ ಕುರ್ಕಾಲರು ಹೆಸರು ಮಾಡಿದ್ದಾರೆ. ಅವರ 'ಇದ್ದವರು ಇರುವರು' ಕೃತಿ ಈ ಮಾದರಿಯದು. ಅವರ ಗದ್ಯ ಸಾಹಿತ್ಯ ಸರಳವಾಗಿದ್ದು, ಸುಲಭವಾಗಿ ನಮ್ಮನ್ನು ಓದಿಸಿಕೊಂಡು ಹೋಗುತ್ತದೆ. ಸಮಕಾಲೀನ ವಿದ್ಯಮಾನಗಳನ್ನು ಕುರ್ಕಾಲರು ತಮ್ಮ ಸಂಪಾದಕೀಯ ಬರಹಗಳಲ್ಲಿ ದಾಖಲಿಸುವುದನ್ನು ಮರೆಯಲಿಲ್ಲ. ಅವರು ಪತ್ರಪುಷ್ಪದ ಸಂಪಾದಕರಾಗಿದ್ದಾಗ ಬರೆದ ಸಂಪಾದಕೀಯ ಬರಹಗಳು ಇಂದಿಗೂ ಮೌಲಿಕ ಬರಹಗಳಾಗಿವೆ. ನವೆಂಬರ್ 12, 2017ರಂದು ಕುರ್ಕಾಲರು ನಮ್ಮೆಲ್ಲರನ್ನು ಅಗಲಿ ಹೋದರು. ಅವರ ಈ ನಿಧನ ಮುಂಬಯಿ ಕನ್ನಡ ಸಾಹಿತ್ಯಕ್ಕೆ ತುಂಬಲಾರದ ನಷ್ಟವಾಗಿದೆ.

ಕುರ್ಕಾಲರ ಸಾಹಿತ್ಯ ವೈವಿಧ್ಯಮಯವಾದುದು. ಅವರು ಎಲ್ಲ ಕ್ಷೇತ್ರಗಳಲ್ಲೂ ಕೈಯಾಡಿಸಿದವರು. ಶಿಕ್ಷಕರಾಗಿ, ಶಿಶುಸಾಹಿತಿಗಳಾಗಿ, ಸಂಘಟಕರಾಗಿ, ಅಂಕಣಕಾರರಾಗಿ ಪತ್ರಿಕಾ ಸಂಪಾದಕರಾಗಿ ಹೊರನಾಡಿನಲ್ಲಿದ್ದು ಕನ್ನಡ ಸೇವೆಯನ್ನು ಮಾಡುತ್ತಿರುವ ಕುರ್ಕಾಲರ ಬದುಕು ಬರಹ ಎಲ್ಲರಿಗೂ ಮಾದರಿಯಾಗಿತ್ತು. ಮಕ್ಕಳ ಚೇತೋಹಾರಿ ಕವನ ಸಂಕಲನದ ಮೂಲಕ ಮುಗ್ಧ ಮನಸ್ಸಿನ ಜೀವನಕ್ಕೊಂದು ಉತ್ತಮ ಮಾರ್ಗದರ್ಶನ ನೀಡಬಲ್ಲ ಈ ಚಿಲಿಪಿಲಿಯ ಕೃರ್ತ ಬಿ. ಎಸ್. ಕುರ್ಕಾಲರು ಇಂದು ನಮ್ಮ ನಡುವೆ ಇಲ್ಲ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಹಾರೈಸುತ್ತೇನೆ.

*Witness maestros on stage….*

*Revel in music and dance…..*

*Experience nature at its best…..*

# 8th Naada Bindu Festival

## February 9 - 11, 2018

**A 3-Day Residential Arts Retreat**

*6 Performances, 2 Art-Talks, Spiritual Discourse & much more…..*

at

**Chinmaya Naada Bindu Gurukula**

Kolwan, Pune

**Featured Artists**

*Malavika Sarukkai* (Bharatanatyam)

*Manjusha Patil* (Hindustani Vocal)

*Malladi Brothers* (Carnatic Vocal)

*Dr Lalitha and Nandini* (Carnatic Violin)

*Vijay Ghate* (Tabla Solo)

*Shankar Kandasamy* (Bharatanatyam)

Contact: **+91 77208 39000 | nbf@cvv.ac.in**

**www.chinmayauniversity.ac.in**

## Come, Experience the Arts as a Lifestyle!

A Chinmaya Vishwavidyapeeth Initiative

CHINMAYA
VISHWAVIDYAPEETH
UNIVERSITY
FOR SANSKRIT & INDIC TRADITIONS

# ಹರಟೆ Discussions

ಅಸೋಸಿಯೇಷನ್ನಿನಲ್ಲಿ ಪ್ರತಿ 15 ದಿನಗಳಲ್ಲಿ ಒಮ್ಮೆ ಪ್ರತಿ ಶನಿವಾರದಂದು ಎಲ್ಲರೂ ಕೂಡಿ ಯಾವುದಾದರೂ ಒಂದು ವಿಷಯವನ್ನು ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವುದೆಂದು ತೀರ್ಮಾನವಾಗಿದೆ. ಇದರ ಮೇರೆಗೆ ಭಾನುವಾರ 19 ನವೆಂಬರ್ 2017 ರಂದು "ತಲೆಮಾರುಗಳ ನಡುವಿನ ತೊಡಕುಗಳು"Generation Gapವಿಷಯವನ್ನು ಕುರಿತು ಎಲ್ಲರೂ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ನೆರೆದ 50 ಮಂದಿಯಲ್ಲಿ ಮೂರು ತಲೆಮಾರುಗಳು ಸೇರಿದ್ದವು. 18–25, 30ರಿಂದ –50, 50 ರಿಂದ 80 ರ ವರೆಗಿನ ಈ ಸದಸ್ಯರು ಬಿಚ್ಚುಮನಸ್ಸಿನಿಂದ ತಮ್ಮ ಅನಿಸಿಕೆಗಳನ್ನು ಮುಂದಿಟ್ಟರು.

ಈ ಅನಿಸಿಕೆಗಳು ಇಂತಿವೆ.

18–25 ರ ಗುಂಪು: ನಮಗೆ ಹೆಚ್ಚಿನ ಕಟ್ಟುಪಾಡುಗಳನ್ನು ತಂದೆತಾಯಿಯರು ಹಾಕುತ್ತಾರೆ. ಹೀಗೆಯೇ ಮಾಡಬೇಕು, ಅಲ್ಲಿ – ಇಲ್ಲಿ, ಅವರಿವರ ಜೊತೆ ಹೋಗಬಾರದು, ಎಂದೆಲ್ಲಾ ಕಟ್ಟು ಹಾಕುತ್ತಾರೆ. ನಮಗೆ ಹೆಚ್ಚಿನ ಸ್ವಾತಂತ್ರ್ಯ ಬೇಕು. ಈಗಿನ ಪೀಳಿಗೆಗೆ, ಪ್ರಪಂಚದ ಹೆಚ್ಚಿನ ಅರಿವು ತಂತ್ರ ಜ್ಞಾನದಿಂದ ಸಿಕ್ಕಿದೆ. ಆದುದರಿಂದ ನಾವು ಅಷ್ಟೇನೂ ದಡ್ಡರಲ್ಲ. ನಮಗೆ ಸಿಗುವ ಸ್ವಾತಂತ್ರ್ಯ ನಾವೇನು ದುರುಪಯೋಗ ಮಾಡುವುದಿಲ್ಲ. ನಮ್ಮ ಕನಸು, ನಾವೇ ನನಸಾಗಿಸುವ ಸ್ವಾತಂತ್ರ್ಯ ನಮಗಿರಬೇಕು. ನಮ್ಮ ಹಿರಿಯರ ಕನಸುಗಳು ಇಂದಿಗೆ ಸಲ್ಲದಾಗುತ್ತವೆ.

50–80ರ ಗುಂಪು: ನಾವೇನು ಕಟ್ಟುಹಾಕುತ್ತಿಲ್ಲ. ನಮಗೆ ಒದಗಿದ ಅನುಭವಗಳನ್ನು ಕಿರಿಯರಿಗೆ ನೀಡಲು ಬಯಸುತ್ತೇವೆ ಅಷ್ಟೆ. ಎಲ್ಲಾ ತಂದೆತಾಯಿಯರಿಗೂ, ಮಕ್ಕಳೇ ಅವರ ಆಸ್ತಿ ಅವರು ನಮಗಿಂತ ಚೆನ್ನಾಗಿ ಬಾಳಿ ಬದುಕಬೇಕೆಂಬುದು ನಮ್ಮ ಆಸೆ. ಎಷ್ಟೋ ಬಾರಿ, ಅನುಭವ ಸಾಲದೆ, ಮಕ್ಕಳು ಇಲ್ಲದ ತೊಂದರೆಗೆ ಸಿಗಬಹುದು. ಅದನ್ನು ತಪ್ಪಿಸುವುದು ತಂದೆ ತಾಯಿಗಳ ಹೊಣೆಗಾರಿಕೆ.

ಹೌದು, ಆದರೆ ಒಬ್ಬರನ್ನೊಬ್ಬರು ಅರಿತುಕೊಳ್ಳುವುದರಿಂದ ಎಷ್ಟೋ ತೊಡಕುಗಳೂ ಬಗೆಹರಿಯುತ್ತವೆ. ಮಕ್ಕಳು ಬಿಚ್ಚು ಮನಸ್ಸಿನಿಂದ ತಮ್ಮ ಅನಿಸಿಕೆಗಳನ್ನು ತಂದೆ ತಾಯಿಗಳ ಜೊತೆ ಹಂಚಿಕೊಳ್ಳುವ ಅಷ್ಟು ತಮ್ಮ ನಂಟನ್ನು ಬೆಳೆಸಿಕೊಂಡಿರಬೇಕು. ಹಾಗಾದರೆ ಏನೂ ತೊಡಕುಗಳು ಬೆಳೆಯುವುದಿಲ್ಲ.

30–50 ರ ಗುಂಪು: ಎಷ್ಟೋ ಬಾರಿ ಮಕ್ಕಳು, ತಂದೆತಾಯಿಯರಿಗೆ ಏನೂ ತಿಳಿಯುವುದಿಲ್ಲ ಎಂದು ತಿಳಿಯುತ್ತಾರೆ. ನಾವುಗಳು ಕಲಿಯುವಾಗ ನಮ್ಮ ಕಂಪ್ಯೂಟರ್ ನಮ್ಮ ತಲೆಯಲ್ಲಿಯೇ ಇರುತ್ತಿತ್ತು. ಈಗಿನ ಹುಡುಗರಿಗೆ, ಒಂದು ಲೆಕ್ಕ ಮಾಡುವುದಾದರೂ ಗಣಕಯಂತ್ರ ಬೇಕೆಯೇ ಬೇಕು. ಏನಾದರೂ ತೋರಬೇಕಾದರೆ ಅದಕ್ಕೆ ಅವರಿಗೆ ಲ್ಯಾಪ್ ಟಾಪ್ ಇರಲೇಬೇಕು. ಇಲ್ಲದಿದ್ದರೆ ಏನೂ ಹೊಳೆಯುವುದಿಲ್ಲ. ಮತ್ತೊಂದು ತೊಡಕೆಂದರೆ, ಹಿಂದಿನ ತಂದೆ–ತಾಯಿಗಳಿಗೆ, 6–8 ಮಕ್ಕಳಿರುತ್ತಿದ್ದರು. ಒಟ್ಟು ಸಂಸಾರದಲ್ಲಿ ಬೆಳೆದ ಮಕ್ಕಳಿಗೆ, ಎಲ್ಲರಲ್ಲಿ ತಾವೂ ಒಬ್ಬರೆಂದು ಅನಿಸಿಕೆ ಬೆಳೆಯುತ್ತಿತ್ತು. ಈಗ ಕೇವಲ ಒಂದೋ ಎರಡೋ ಮಕ್ಕಳಿದ್ದು, ಮಕ್ಕಳ ಮೇಲೆ ಅತೀವವಾಗಿ ಕಣ್ಣಿಟ್ಟಿರುತ್ತಾರೆ. ಮಕ್ಕಳು ಎಲ್ಲಿ ಹೋದರೂ ತಾವೇ ಮೇಲೆ ಬಿದ್ದು ಬರುತ್ತಾರೆ. Ph.D ಓದುವ ಹುಡುಗರ ತಾಯಿಯೂ ಕೂಡ ತಾನೇ ಬಂದು ಪ್ರೊಫೆಸರ್‌ಗಳೊಡನೆ ಜಗಳವಾಡುತ್ತಾರೆ. ಇಂತಹ ಅತೀವ ಮೇಲ್ವಿಚಾರಣೆ ಮಕ್ಕಳ ಬೆಳವಣಿಗೆಗೆ ಅಡ್ಡಿಯಾಗಿ, ಅವರಿಗೆ ತಮ್ಮದೇ ಹೊಣೆಗಾರಿಕೆ ಬೆಳೆಸಿಕೊಳ್ಳುವುದು ತಪ್ಪುತ್ತದೆ.

18–25 ರ ಗುಂಪು: ಹಾಗೇನಿಲ್ಲ. ನಮ್ಮದೇ ವಿಚಾರಗಳಿರುತ್ತವೆ. ಜಗತ್ತು ಹಿಂದಿನಂತಿಲ್ಲ. ಟೆಕ್ನಾಲಜಿ ಬಹಳ ಮುಂದುವರೆದಿದೆ. ನಾವುಗಳು ಅದರ ಸಮಸಮ ನಡೆಯದಿದ್ದರೆ, ಈ ಪೈಪೋಟಿಯ ಜಗತ್ತಿನಲ್ಲಿ ನಮಗೆ ಪಾಲಿಲ್ಲದಾಗುತ್ತದೆ. ಹಿಂದೆ ಇಂಜಿನಿಯರ್ ಪಾಸಾಗುವುದೇ ತಡ, ಕೆಲಸ ಸಿಗುತ್ತಿತ್ತು. ಈಗ ಇಂಜಿನಿಯರಿಂಗ್‌ಗಳಿಗೆ ಜಾಗವೇ ಇಲ್ಲ. ನಾವು ಇನ್ನೂ ಹೆಚ್ಚಿನ ಕಲಿಕೆ ಮಾಡದಿದ್ದರೆ ಎಲ್ಲೂ ಸ್ಥಳವಿರುವುದಿಲ್ಲ. ಆದ್ದರಿಂದ ನಮ್ಮ ಹೊಣೆಗಾರಿಕೆ ಇನ್ನೂ ಹೆಚ್ಚಿದೆ. ಹಿಂದಿನಂತಿಲ್ಲ. ನಮಗೆ ನಮ್ಮದೇ ಅತ್ತ–ಇತ್ತ ತಾವು ಬೇಕಾಗಿದೆ. ತಂದೆತಾಯಿರು ಇದನ್ನು ನಮಗೆ ಈಯಲೇಬೇಕು.

50–80ರ ಗುಂಪು: ನಮಗೆ ಅತ್ತಲೂ ಇಲ್ಲ, ಇತ್ತಲೂ ಎನ್ನುವಂತಾಗಿದೆ. ನಾವು ಮಕ್ಕಳಿದ್ದಾಗ ನಾವು ತಂದೆತಾಯಿಯರ ಮಾತು ಕೇಳಲೇ ಬೇಕಾಗಿತ್ತು. ಇಂದು ನಾವು ನಮ್ಮ ಮಕ್ಕಳು ಹೇಳಿದ ಹಾಗೆ ಕೇಳಬೇಕಾಗಿದೆ. ಇಂದಿನ ಅತ್ತೆಯರು ಮೊದಲ ದಿನದಿಂದಲೇ, ಸೊಸೆಯರ ಕೈಗೆ ಇಲ್ಲ ಬೀಳಬೇಕು, ಇಲ್ಲವೇ ಮನೆಯಿಂದ ಹೊರಗಾಗಬೇಕು. ಇವರಿಗೆ ಇರುವ ಸ್ವಾತಂತ್ರ್ಯ ನಮಗೇಕಿಲ್ಲ? ನಮ್ಮ ಎಲ್ಲಾ ಆಸ್ತಿಗಳನ್ನೂ ಆಸೆಗಳನ್ನೂ ಮಕ್ಕಳಿಗೆ ಅರ್ಪಿಸಿದ ಮೇಲೆ ನಮ್ಮನ್ನು ಹಂಗಿಸುವುದು ಏಕೆ? ಇವರಿಗೆ ಸಿಕ್ಕ ವಿದ್ಯಾಭ್ಯಾಸ ನಮಗೆಲ್ಲಿ ಸಿಕ್ಕಿತು? ಇವರಿಗೆ ಕೆಲಸದಿಂದ ಸಿಗುವ ಆರ್ಥಿಕ ಸ್ವಾತಂತ್ರ್ಯ ನಮಗೆಲ್ಲಿತ್ತು? ಹೀಗಾಗಿ ನಮಗೆ ಅಲ್ಲೂ ಇಲ್ಲ ಎಲ್ಲೂ ಇಲ್ಲವಾಗಿದೆ.

30–50 ರ ಗುಂಪು: ನಾವು ಮಕ್ಕಳ ಮೇಲೆ ಹೆಚ್ಚು ಒತ್ತಡ ಹೇರಿದರೆ, ಅದು ದುರಂತದಲ್ಲೂ ಪರಿಣಾಮಗೊಳ್ಳಬಹುದು. ನಾವು ಮಕ್ಕಳೊಡನೆ ಹೆಚ್ಚು ಒಡನಾಟ ಇಟ್ಟುಕೊಳ್ಳಬೇಕು ಮಕ್ಕಳು ಮನೆಗೆ ಬಂದಾಗ ಅವರೊಡನೆ ಮಾತುಕತೆ ಇರಬೇಕು. ಅವರಿಗೆ ನಮ್ಮೊಡನೆ ಬಿಚ್ಚು ಮನಸ್ಸಿಂದ ಮಾತನಾಡಬಹುದು ಎನ್ನುವ ನಂಬಿಕೆ ಬರಬೇಕು.

ಎಲ್ಲವನ್ನೂ ಮೀರಿದ ಗುಂಪು: ಟೆಕ್ನಾಲಜಿಯಿಂದಜಗತ್ತು ಬದಲಾಗಿದೆ ಎನ್ನುವುದು ಸುಳ್ಳು. ಮೊದಲು ಕಲ್ಲು ತೂರುತ್ತಿದ್ದವರು, ಇಂದು ರಾಕೆಟ್‌ನಿಂದ ಹೊಡೆಯುತ್ತಿದ್ದಾರೆ. ಇದರಲ್ಲಿ ಮನೋಭಾವ ಏನೂ ಬದಲಾಗಿಲ್ಲ. ನಾನು ಹೇಳಿದಂತೆಯೇ ಆಗಬೇಕೆಂಬುದು ಕಿರಿಯರಿಗೂ, ಹಿರಿಯರಿಗೂ ಇರುವ ಕಾಯಿಲೆ. ಇದರಲ್ಲಿ ವಯೋಮಿತಿಯ ಅಗತ್ಯವಿಲ್ಲ. ಎಲ್ಲರೂ ಒಂದೇ. ಕೆಲವು ಕಿರಿಯರು 18 ವರ್ಷದಲ್ಲಿಯೇ ಮುದುಕರಾಗಿ ಬಿಡುತ್ತಾರೆ. ಎಲ್ಲರಿಗೂ ತಮ್ಮದೆ ಅಣತಿಗಳನ್ನು ನೀಡುತ್ತಿರುತ್ತಾರೆ ಮುಖ್ಯವಾಗಿ, ಹಿರಿಯರಾಗಲಿ, ಕಿರಿಯವರಾಗಲಿ ಒಬ್ಬರನ್ನೊಬ್ಬರು ಅರಿತು ನಡೆಯಬೇಕು. 80 ವಯಸ್ಸಾದ ಮೇಲೆ ಎಲ್ಲರೂ ಮತ್ತೆ ಮಕ್ಕಳಾಗಿ ಬಿಡುತ್ತಾರೆ. ಸಮಾಜಕ್ಕೆ ಮತ್ತೆ ನಾವು ಕೊಡುಗೆಯನ್ನು ನೀಡಬೇಕಾದರೆ ಈ ಹಿರಿಯ ಮಕ್ಕಳ ಆರೈಕೆಯನ್ನು ಮಾಡಬೇಕು. ಇದನ್ನು ಅರಿಯುವುದೇ ಜೀವನ ಬೇಂದ್ರೆಯವರು ಹೇಳಿದಂತೆ

**'ರಸವೆ ಜನನ ವಿರಸ ಮರಣ**
**ಸಮರಸವೇ ಜೀವನ"**

# ಅಭಿನಂದನೆಗಳು – ಡಾ। ಬಿ. ಆರ್. ಮಂಜುನಾಥ್ ಅವರಿಗೆ




ಮೈಸೂರು ಅಸೋಸಿಯೇಷನ್‌ನ ಅಜೀವ ಸದಸ್ಯರಾದ ಡಾ। ಬಿ. ಆರ್. ಮಂಜುನಾಥ್ ಅವರನ್ನು ಇದೇ ನವೆಂಬರ್ ತಿಂಗಳಿನಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ಅವರು ಕನ್ನಡನಾಡು, ನುಡಿ, ಸಂಸ್ಕೃತಿಗೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, ಸನ್ಮಾನಿಸಲಾಯಿತು. ಅದರ ಹಿನ್ನೆಲೆಯಲ್ಲಿ ಅವರಿಂದ ನಮ್ಮ ಮೈಸೂರು ಅಸೋಸಿಯೇಷನ್‌ಗಷ್ಟೆ ಅಲ್ಲ ಇಡೀ ಮುಂಬಯಿ ಕನ್ನಡಿಗರಿಗೆ ಹೆಮ್ಮೆ ಎನಿಸುವಂಥ ಅವರ ಕೊಡುಗೆಯ ಒಂದು ಸ್ಮರಣೆ.

ಡಾ। ಬಿಳಿಗೆರೆ ರಾಮಚಂದ್ರರಾವ್ ಮಂಜುನಾಥ್ ಅವರು ತುಮಕೂರಿನವರು. ಶಾಲಾ ವಿದ್ಯಾಭ್ಯಾಸ ಕನ್ನಡ ಮಾಧ್ಯಮದಲ್ಲಿಯೇ ನಡೆಯಿತು. ಮುಂದೆ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದದ್ದು ಬೆಂಗಳೂರಿನ ವಿಶ್ವವಿದ್ಯಾಲಯದಿಂದ, ಅಲ್ಲಿಂದ ಮುಂಬಯಿಗೆ ಕೆಲಸಕ್ಕಾಗಿ ವಲಸೆ ಬಂದಿದ್ದು 1962 ರಲ್ಲಿ. ಆಗಿನಿಂದಲೇ ಮೈಸೂರು ಅಸೋಸಿಯೇಷನ್ನಿನ ಒಡನಾಟ ಬೆಳೆದು ಬಂತು. ಆ ಮಧ್ಯದಲ್ಲಿಯೇ ಅವರು ಆಕ್ಸ್‌ಫರ್ಡ್‌ಗೆ ಹೋಗಿ ಪಾಲಿಮರ್ ಫಿಸಿಕ್ಸ್‌ನಲ್ಲಿ ಡಾಕ್ಟರೇಟ್ ಪಡೆದು ಹಿಂತಿರುಗಿ ಬಂದರು. ಒಬ್ಬ ವಿಜ್ಞಾನಿಯಾಗಿ, ಕುಶಲ ಉದ್ಯಮಿಯಾಗಿ ದೈತ್ಯನಾಗಿ ಬೆಳೆದರು. ಎರಡು ಮೂರು ಸಂಸ್ಥೆಗಳನ್ನು ಹುಟ್ಟುಹಾಕಿ ನೂರಾರು ಜನರ ಬಾಳಿಗೆ ಆಧಾರವನ್ನು ಒದಗಿಸಿದರು.



ಅದರೆಡೆಯಲ್ಲಿಯೇ ಕನ್ನಡಕ್ಕಾಗಿ, ಕಲೆಗಾಗಿ ತುಡಿತ. ಹೀಗಾಗಿ ಕನ್ನಡ ಕಲಾ ಕೇಂದ್ರದ ಸ್ಥಾಪಕ ಸದಸ್ಯರಾದರು. ಕರ್ನಾಟಕ ಸಂಘ, ಮುಂಬಯಿ ಇದರ ಸದಸ್ಯರಾದರು. ಅದರ ಎಲ್ಲಾ ಕಾರ್ಯಕ್ರಮಗಳಿಗೂ ಉತ್ತೇಜನ ಕೊಟ್ಟರು. ತಾವೇ 10–18 ನಾಟಕಗಳನ್ನು ಬರೆದು ಆಡಿಸಿದರು. ಮೈಸೂರು ಅಸೋಸಿಯೇಷನ್‌ನ ಕಲಾವಿಭಾಗಕ್ಕೆ ಮರುಜೀವ ನೀಡಿದರು. ಇಂದಿನ ಮೈಸೂರು ಅಸೋಸಿಯೇಷನ್ನಿನ ಸುಸಜ್ಜಿತ ಸಭಾಗೃಹ ಅವರ ಮತ್ತು ಶ್ರೀ. ಮಂಜುನಾಥಯ್ಯ ಅವರ ಕೊಡುಗೆ. ನಾಟಕಗಳ ಜೊತೆ ಜೊತೆಗೆ ನೃತ್ಯ, ಹಾಡು, ಸಂಗೀತ, ಚಿತ್ರಕಲೆ, ಸಾಹಿತ್ಯ ಎಲ್ಲವನ್ನೂ ಪುರಸ್ಕರಿಸಿದರು, ಬೆಳೆಸಿದರು. ಎಲ್ಲದರಲ್ಲಿಯೂ ಕನ್ನಡವನ್ನು ಉಳಿಸಿ ಬೆಳೆಸಬೇಕು ಎಂಬುವುದೊಂದೇ ಅವರ ಆಶಯವಾಗಿತ್ತು.





ಇದೇ ಕಾರಣಕ್ಕೆ ಅವರ ಆಸಕ್ತಿ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯು ನಡೆಸುವ ಎನ್.ಕೆ.ಇ.ಎಸ್ ಪ್ರೌಢ ಶಾಲೆಯಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಪ್ರೇರೇಪಿಸಿತು. ಕಳೆದ ಮೂವತ್ತು ವರ್ಷಗಳಲ್ಲಿ ಅವರು ಶಾಲೆಯನ್ನು ಬೆಳೆಸಿದ ಸಾಹಸ ನಿಜವಾಗಿಯೂ ಶ್ಲಾಘನೀಯ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಇದ್ದುವಾದರೂ ಅಲ್ಲಿ ಕಲಿಯುತ್ತಿದ್ದ ಮಕ್ಕಳಲ್ಲಿ ಕಲಿಕೆಯ ಉತ್ಸಾಹ ಕಾಣದೆ ಶಾಲಾಂತ್ಯ ಪರೀಕ್ಷೆಯಲ್ಲಿ ಬರುತ್ತಿದ್ದ ಫಲಿತಾಂಶ ನಿರಾಶಾದಾಯಕವಾಗಿರುತ್ತಿತ್ತು. ಇಂದು ಅಲ್ಲಿ 100% ಫಲಿತಾಂಶವನ್ನು ಕಾಣುವುದಲ್ಲದೆ, ಮಕ್ಕಳಲ್ಲಿ ಸರ್ವತೋಮುಖವಾದ ಏಳಿಗೆಗೆ ಬೇಕಾಗುವ ಎಲ್ಲ ಬಗೆಯ ಚಟುವಟಿಕೆಗಳಿಂದ ವಿದ್ಯಾರ್ಥಿಗಳು ಉತ್ತಮ ಪ್ರಜೆಗಳಾಗುವ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ ವ್ಯವಹಾರ ಕುಶಲತೆಯನ್ನು ಬೆಳಗುವ ಸ್ನಾತಕೋತ್ತರ ಪದವಿ ಸಂಸ್ಥೆ SVIMS ಅನ್ನು ಕಟ್ಟಿ ಬೆಳೆಸಿದ ಕೀರ್ತಿಯೂ ಇವರಿಗೆ ಸಲ್ಲುತ್ತದೆ.

ಹೀಗೆ ನಾಟಕಕಾರರಾಗಿ, ಕವಿಯಾಗಿ, ಸಾಹಿತಿಯಾಗಿ, ನಟನಾಗಿ, ಉದ್ಯಮಿಯಾಗಿ, ಶಿಕ್ಷಣ ತಜ್ಞನಾಗಿ, ಸಂಘಟಕನಾಗಿ, ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸುವವನ್ನಾಗಿ, ಉತ್ತಮ ಮಾರ್ಗದರ್ಶಕನಾಗಿ, ಸ್ನೇಹಿತನಾಗಿ, ಡಾ। ಬಿ. ಆರ್. ಮಂಜುನಾಥ್ ಅವರ ಕೊಡುಗೆ ಅಪಾರ. ಅವರನ್ನು ಹುಡುಕಿ ಬಂದ ಸನ್ಮಾನಗಳನ್ನು ಅವರು ನಿರಾಕರಿಸಿದುದೇ ಹೆಚ್ಚು. ಅವರು ನಮ್ಮ ಮುಂಬಯಿಯ, ಕರ್ನಾಟಕದ ಅಷ್ಟೇ ಏಕೆ, ನಮ್ಮ ದೇಶದ ಹೆಮ್ಮೆಯ ಪುತ್ರ. ಅವರಿಗೆ ನಮ್ಮ ಅನಂತಾನಂತ ಅಭಿನಂದನೆಗಳು. ಅವರು ನೂರ್ಕಾಲ ಆರೋಗ್ಯದಿಂದ ಬಾಳಿ ನಮ್ಮೊಡನಿದ್ದು ನಮಗೆ ಸ್ಪೂರ್ತಿಯಾಗಿರಲಿ ಎಂದು ಹಾರೈಸುತ್ತೇವೆ.

**ಮೈಸೂರು ಅಸೋಸಿಯೇಷನ್ ಆಡಳಿತ ಸಮಿತಿ ಮತ್ತು ಸದಸ್ಯರು**

# Dr. B R Manjunath, as I saw him



✍ **Dr. Kiran Yadav,** SVIMS

There are some people who create a very strong impression the moment you meet them.You may like or dislike, but you just cannot ignore them. Dr. Manjunath is one such a person.

He stands out in a crowd. He always makes his presence felt, be it an esoteric debate or an intensive dance competition. He can stir an animated argument or rock the dance floor. Always full of energy and passion which can put person a third his age to shame, he does not give up on any discussion merely out of frustration. No matter the forum or audience, he can stand up and speak his mind. He fights for what he believes in, regardless of consequences. He is at ease in such diverse topics as modern scientific theory, management practices to the age old Vedic philosophies and wisdom. He is at home with latest technology, with students on social media, as also with traditional poojas and artist. He can quote Shakespeare in chaste English and recite Sanskrit shlokas with impeccable diction at the same time. He is compassionate enough to bear the fees of a needy student from his own pocket and, at the same time,strict enough to deduct the salary of an errant employee for dereliction of duty. When he is around, there are no dull moments.

I first met Dr. Manjunath at an educational exhibition where we were co-exhibitors. I was curiously watching him engage with young students. As I joined them, I realized that he was a master performer who could connect with people easily. He was enigmatic, with the demeanor of an erstwhile film starand a youthful charm lined with anecdotes of knowledge and advice. As I introduced myself, I was impressed by his sincerity and keen listening. Thus began a journey of joint struggle to create an institution of excellence.

For many, he is not an easy person to deal with. He has strong opinions which he never hesitates to express. It takes sustained effort to convince him through reason and logic. He is also very emotional and impulsive who responds from the gut. This blend makes him decisive and vulnerable at the same time.However, once you have earned his trust and confidence, you can be assured of his support. In fact, the burden of responsibility shifts to your shoulders to not be complacent and ensure fulfilment as per expectations.

I felt I had achieved reasonable success in my long corporate life. Then I met him and realized the limits of my so called achievements and also the meaning of serving without expectations.Also, the pleasure of giving, the fun of mentoring and joy of seeing others succeed. I felt empowered to try.

Recently, Dr. Manjunath decided to withdraw from center stage. I was upset at this abrupt disconnect and decided to quit. Then I recalled the instances, when we tookunconventional ways to reach out to potential MBA students whilst building the SVIMS brand. He had agreed to go along, even though not fully convinced. I saw merit in his method too and decided to stop questioning and get on with the task on hand irrespective of the outcome. As he says, success is not a destination, but a journey.

I am hoping to live his dream of sowing the seed to create at least one more Sir M Visvesvaraya through SVIMS, if not, at least another Dr Manjunath.I pray to see it happen.

# ನಾವು ಕಂಡಂತೆ ಡಾ. ಮಂಜುನಾಥ್



✍ ಭಾರತಿ ಪ್ರಸಾದ್

ನನಗೆ ಡಾ. ಮಂಜುನಾಥ್ ನನ್ನ ಸ್ಕೂಲು ದಿನಗಳಿಂದ ಗೊತ್ತು. ಅವರ ತಂಗಿ ಮಮತಾ ಮತ್ತು ನಾನು ಒಂದೇ ಕ್ಲಾಸಿನಲ್ಲಿ 4 ನೇ ಕ್ಲಾಸಿನಿಂದ graduation ಮುಗಿಸುವವರೆಗೆ ಒದಿದೆವು.ನಾನು ನಿತ್ಯ ನಮ್ಮ ಮನೆಯಿಂದ ಅವರ ಮನೆಗೆ ಹೋಗಿ ಮಮತಾ ಜೊತೆ ಸ್ಕೂಲಿಗೆ ಹೋಗುವುದು ಅಭ್ಯಾಸ ವಾಗಿತ್ತು. ಆದ್ದರಿಂದ ನನಗೆ ಅವರ ಮನೆ0ುವರೆಲ್ಲರೂ ಪರಿಚಿತರಾಗಿದ್ದರು. ಡಾ. ಮಂಜುನಾಥರನ್ನು ಮನೆ0ುಲ್ಲಿ ಮೋಹನ ಎಂದು ಕರೆ0ುತ್ತಿದ್ದರು. ಹಾಗಾಗಿ ನನಗೆ ಆ ಹೆಸರೇ ಪರಿಚ0ುವಿತ್ತು.

ನಾವು 1976 ರಲ್ಲಿ ಮುಂಬೈಯಿಗೆ ಬಂದೆವಿ. ನನ್ನ cousin ರಮಾ –ಚಂಪಕನಾಥರ ಮಗಳು – ಆಗ ಅಸೋಸಿ0ೇಷನ್ನಿನ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದಳು. ಅವಳು ಒಂದು ದಿನ ನಮ್ಮನ್ನು ಅವರ ಮನೆ0ುಲ್ಲಿ ಅಸೋಸಿ0ೇಷನ್ನಿನ ನಾಟಕದ ಬಳಗದವರಿಗೆ ಏರ್ಪಡಿಸಿದ್ದ ಕೂಟಕ್ಕೆ ಕರದು ನಿನಗೆ ಡಾ. ಮಂಜುನಾಥ ಅವರನ್ನ ಪರಿಚ0ು ಮಾಡಿಕೊಡುತ್ತೇನೆ ಎಂದು ಹೇಳಿದಳು.ನಾನು ಅಲ್ಲಿಗೆ ಹೋದಾಗ ಅವಳು ಡಾ. ಮಂಜುನಾಥ್ ಎಂದು ಮೋಹನನನ್ನು ಪರಿಚಯಿಸಿದಾಗ ನನಗೆ ಎಲ್ಲಿಲ್ಲದ ಆಶ್ಚ0ುರ್ ಮತ್ತು ಸಂತೋಷ ಆಯಿತು. ನಂತರ ನಾವು ಅಸೋಸಿ0ೇಷನ್ನಿನಲ್ಲಿ ಸಕ್ರಿ0ುವಾಗಿ ಭಾಗವಹಿಸ ತೊಡಗಿದೆವು ಮತ್ತು ಡಾ. ಮಂಜುನಾಥರೊಡನೆ ನಮ್ಮ ಒಡನಾಟ ಬೆಳೆಯಿತು.

ಡಾ. ಮಂಜುನಾಥ್ ಖಂಡಿತವಾದಿ. ಇದ್ದದನ್ನು ಇದ್ದ ಹಂಗೇ ನೇರವಾಗಿ ಹೇಳುವ ಸ್ವಭಾವದವರು. ಇದು ಕೆಲವು ಸಲ ಒರಟಾಗಿ ಕಂಡರೂ, ಅವರ ಹೃದ0ು ಹೂವಿನಂತೆ ಮೃದುವಾದದ್ದು. ಎಲ್ಲರನ್ನು ಕಂಡರೂ ಅನುಕಂಪ ಮತ್ತು ಕಾಳಜಿ. ಯವಾಗಲೂ ಸಹಾ0ುಕ್ಕೆ ಸಿದ್ಧ. ಅವರು ನಮಗೆ ಒಬ್ಬ friend, philosopher and guide. ಅವರು ಯಾವ ವಿಧವಾದ ಸಮಸ್ಯೆ0ಾದರೂ, ಅದಕ್ಕೆ ಸೂಕ್ತ ಪರಿಹಾರವನ್ನು ಕಂಡು ಹಿಡಿ0ುುವ ಸಾಮರ್ಥ್ಯ ಹೊಂದಿದವರು. ನಾನು ಅವರಿಂದ ಬಹಳ ವಿಷ0ುಗಳನ್ನು ಕಲಿತಿದ್ದೇನೆ. ಅವರಿಗೆ ನನ್ನನ್ನ ಮತ್ತು ಲಲಿತಾ ಬಾಲುವನ್ನು ಕಂಡರೆ ಸ್ವಂತ ತಂಗಿ0ುರಂತೆ ಪ್ರೀತಿ ಮತ್ತು ಅಭಿಮಾನ. ನನ್ನ ಮಗ ಚೇತನ್ ಮತ್ತು ಲಲಿತಾ ಮಗ ಅರ್ಜುನ್ ಇಬ್ಬರಿಗೂ, ಡಾಕ್ಟರ್ ಮಾಮಾ ಅಂದರೆ ತುಂಬಾ ಪ್ರೀತಿ ಮತ್ತು ಸಲಿಗೆ. Weekends ನಲ್ಲಿ ಅವರ ಮನೆ0ುಲ್ಲಿ stay ಮಾಡಿ ಬಹಳ enjoy ಮಾಡಿಕೊಂಡು ಬರುತ್ತಿದ್ದರು. ಡಾ. ಮಂಜುನಾಥರಿಗೆ ಯಾವುದೇ ಕೆಲಸವನ್ನು ತೆಗೆದುಕೊಂಡರೂ ಅದನ್ನು ಸಫಲವಾಗಿ ನೆರವೇರಿಸುವ ಛಲ. ನಾಟಕ ಮಾಡಲು ಬರದಿದ್ದವರಿಂದಲೂ ಯಶಸ್ವಿ0ಾಗಿ ನಾಟಕ ಮಾಡಿಸಿದ್ದಾರೆ. ಅವರಿಗೆ ಒಂದು ಕೆಲಸವನ್ನು ಒಪ್ಪಿಸಿದರೆ ಅದು ನೆರವೇರಿದಂತೆ0ೇ ಎಂದು ನಾವು ನೆಮ್ಮದಿಯಿಂದ ಇರಬಹುದು; ಅವರು ಅಷ್ಟು ನಂಬಿಕೆಗೆ ಅರ್ಹರು.ಅವರಿಗೆ ಸಂದ ಸನ್ಮಾನದ ಬಗ್ಗೆ ಕೇಳಿ ಬಹಳ ಸಂತೋಷವಾಯಿತು. It is a well-deserved recognition, perhaps overdue.

******

ಡಾ. ಮಂಜುನಾಥ್ ಎಂ.ಎಸ್.ಸಿ ಮುಗಿಸಿ ಕೆಲಸಕ್ಕೆ ಸೇರಿಕೊಳ್ಳಲು 1962/63ರಲ್ಲಿ ಬೊಂಬಾಯಿಗೆ ಬಂದರು. ನನಗೆ ಆಗಲಿಂದ ಅವರ ಪರಿಚ0ು. ಆದರೆ ಆಗ ನಾನು ಬೊಂಬಾಯಿಗೆ 0ಾವಾಗಲೋ ಒಮ್ಮೆ ಬರುತ್ತಿದ್ದರಿಂದ ಹೆಚ್ಚು ಒಡನಾಟಕ್ಕೆ ಅವಕಾಶವಿರಲಿಲ್ಲ. ನಂತರ ಅವರು ಮುಂದಕ್ಕೆ ಓದಿ ಡಾಕ್ಟರೇಟ್ ಪಧವಿ0ುನ್ನೂ ಪಡೆದರು. ನಾವು 1976ರ ಕೊನೆ0ುಲ್ಲಿ ಮುಂಬೈಗೆ ಬಂದೆವು ಮತ್ತು ಕ್ರಮೇಣವಾಗಿ ಅಸೋಸಿ0ೇಷನ್ನಿನ ಚಟುವಟಿಕೆಗಳಲ್ಲಿ ಭಾಗವಹಿಸಲಾರಂಭಿಸಿದೆವು. ಆಗ ಡಾ. ಮಂಜುನಾಥರೊಡನೆ ಒಡನಾಟ ಬೆಳೆಯಿತು.

ನೇರವಾದ, ಖಂಡಿತ ನುಡಿ, ಅವರ ಸ್ವಭಾವ. ಇದು ಎಷ್ಟೋ ಸಲ ಒರಟಾಗಿ ಕಾಣ ಬಹುದು. ಆದರೆಅದರ ಹಿಂದೆ ಬಹಳ ಕಾಳಜಿ ಮತ್ತು ಅನುಕಂಪ ಇತ್ತು. ಅವರು 'ಸ್ನೇಹಿತರು ಎಂದರೆ ತೆರೆದ ಮನಸ್ಸಿನಿಂದ ಒಬ್ಬರಿಗೊಬ್ಬರು ಸರಿ0ಾದ ದಾರಿತೋರಿಸಬೇಕು ಅದನ್ನು ಬಿಟ್ಟು ಬರಿ0ು ಹೊಗಳಿಕೆ0ು ಮಾತುಗಳನ್ನು ಆಡುವುದಲ್ಲ' ಎಂಬುದರಲ್ಲಿ ಬಹಳ ವಿಶ್ವಾಸವಿಟ್ಟವರು.

ಅಸೋಸಿ0ೇಷನ್ನಿನಲ್ಲಿ ಅವರು ನಾಟಕಗಳಲ್ಲಿ ಮಕ್ಕಳಿಗೂ ಒಂದು ಪಾತ್ರವನ್ನು create ಮಾಡಿ ಅವರುಗಳನ್ನೂ ಸೇರಿಸಿಕೊಳ್ಳುತ್ತಿದ್ದರು. ಇದರ ಉದ್ದೇಶವೇನೆಂದರೆ ಇದರ ಮೂಲಕ ಮಕ್ಕಳಿಗೆ ಕನ್ನಡ ಕಲಿಸುವುದು ಮತ್ತು Good posture, gait, diction, confidence, ಇತ್ಯಾದಿಗಳನ್ನು ಬೆಳೆಸುವುದಾಗಿತ್ತು. ನಾಟಕದಲ್ಲಿ ತಂದೆ, ತಾಯಿ, ಮಕ್ಕಳೂ ಸೇರಿಕೊಂಡದ್ದರಿಂದ ಅನೇಕ ಫ್ಯಾಮಿಲಿಗಳು ನಿಕಟವಾಗಿ ಬೆಳೆದು ಒಂದು extended family 0ಾಗಿ ಬೆಳೆಯಿತು.

ಅಸೋಸಿ0ೇಷನ್ನಿನ ಮತ್ತುಕನಡ ಶಾಲೆ0ು ಬೆಳವಣಿಗೆಗಾಗಿ ಅವರು ಬಹಳ ಶ್ರಮಿಸಿದ್ದಾರೆ.ಅವರಿಗೆ ಈ ಸಂಸ್ಥೆ0ು ಬಗ್ಗೆ ಎಷ್ಟು ಕಾಳಜಿ ಮತ್ತು ಅಭಿಮಾನವಿತ್ತು ಎಂದರೆ ನಾವು ಅಸೋಸಿ0ೇಷನ್ನಿನ ಕಟ್ಟಡವನ್ನು ನವೀಕರಿಸುತ್ತಿದ್ದಾಗ ಕೆಲವು ಸಂದರ್ಭಗಳಲ್ಲಿ ನಮ್ಮ ಹತ್ತಿರ ದೈನಂದಿನದ ಖರ್ಚುಗಳಿಗೂ ಹಣದ ಕೊರತೆ ಉಂಟಾಗುತ್ತಿತ್ತು. ಆಗ ಅವರು ಆ ಖರ್ಚನ್ನು ತುಂಬಲು ಮುಂದೆ ಬರುತ್ತಿದ್ದರು ಮತ್ತು ನಾವು ಕೆಲವರು ಸೇರಿ ನಮ್ಮ ಹಣವನ್ನು ಹಾಕಿ ಖರ್ಚನ್ನು ಪೂರೈಸುತ್ತಿದ್ದೆವು. ಇದು ಅವರ commitmentಗೆ ಒಂದು ಉದಾಹರಣೆ.

ಅನೇಕ ವಿಷ0ುಗಳಲ್ಲಿ ಆಳವಾದ ಜ್ಞಾನವುಳ್ಳ ಡಾ. ಮಂಜುನಾಥ್ ಉತ್ತಮ ನಾಟಕಕಾರರು, ನಿರ್ದೇಶಕರು, ಲೇಖಕರು, ವಾಗ್ಮಿ. ಎಲ್ಲಕಿಂತ ಹೆಚ್ಚಾಗಿ ಅವರು ಇತರಲ್ಲಿ ಪ್ರೀತಿ ಮತ್ತು ಅನುಕಂಪವುಳ್ಳ ಒಬ್ಬ ಉತ್ತಮ ವ್ಯಕ್ತಿ.

ನಮ್ಮೆಲ್ಲರಿಗೂ ಓರ್ವ ಒಳ್ಳೆ0ು ಮಿತ್ರ ಮತ್ತು ಹಿತೈಷಿ. ಅವರಿಗೆ ಈ ಗೌರವ ಸಂದಿರುವುದು ನಮ್ಮೆಲ್ಲರಿಗೂ ಬಹಳ ಹೆಮ್ಮೆ0ು ವಿಷ0ು.

✍ ಎಂ.ಎನ್. ಪ್ರಸಾದ್


# Dr. Manjunath – Contribution to NKES school.



✍ **Saroja Rao**

I Smt. Saroja Rao Principal of NKES School take this opportunity to congratulate Dr. B.R. Manjunathon behalf of Staff of NKES for the recognition of his works in the field of Art & Culture and honoured by Kannada Sahitya Parishad at Mysore on 26.11.2017.

Sir, your contribution and achievement are commendable and noteworthy. Truly you are A Man of Many accomplish ments be it in the field of your profession , as Physicist, Scientist, Mathematician, Entrepreneur, Educator, Philanthropist, Writer, Director, Singer and Facilitator and your contribution to NKES is beyond expression. Your involvement and commitment to schools in particular as Chairman of school committee of NKES Schools extending to 3 decades,I have no words to express. Your role as member and chairman in establishing the institutions'Mission, Vision, Values, Goals are reflected in the results both quantitative and qualitative.






As chairman, your demonstrated excellent focus on planning, goal setting, effective implementation, as also in framing policies in admission and recruitment. Under your leadership, I could plan and execute both academics and beyond academics successfully to improve the Institution.

You have always been in the forefront for enrichment programmes for staff and students and Empower educations. NKES has witnessed a total change in the overall development of the Institution, ambience and infrastructure. Specifically,your focus was on achievementsof students,their overall personality development through seminars, workshops, drama, dance, and music. You also focused on the their well being, safety, security and encouragedthe students and teachers to perform and excel through incentives. Your contribution to NKES invaluable. You have always inspired all as a teacher. You have led the students towards being good human beings, rather than only having good academic certificate.

The Woods are lovely dark and deep,
I have promises to keep
Miles to go before I got to sleep
Miles to go before I got to sleep

# ಮಾತಿನ ಮಹತ್ವ



ಮಾತೇ ಮಾಣಿಕ್ಯ ಎಂದು ದೊಡ್ಡವರು ಹೇಳಿದ್ದಿದೆ. ಆದರೆ ಆಧುನಿಕ ಜಗತ್ತಿನಲ್ಲಿ, ನ್ಯೂಕ್ಲಿಯರ್ ಕುಟುಂಬಗಳಲ್ಲಿ, ಗಂಡ ಹೆಂಡತಿ ಇಬ್ಬರೂ ಹೊರಗೆ ಕೆಲಸ ಮಾಡುವ, ಹೊತ್ತಾಗಿ ಮನೆಗೆ ಬರುವ, ಮಕ್ಕಳ ಹೋಂ ವರ್ಕ್, ಮನೆಕೆಲಸ ದಿನದಿನವೂ ಮುಗಿಸಿ ಸುಸ್ತಾಗಿ ಮಲಗುವ ಬವಣೆಯಲ್ಲಿ ಯಾರಿಗೂ ಮಾತನಾಡಲು ಬಿಡುವಿಲ್ಲ. ಆಫೀಸಿನ ಕರೆಕರೆ, ರಸ್ತೆಯಲ್ಲಿ ಟ್ರಾಫಿಕ್ ಜಾಮ್, ಮನೆಯಲ್ಲಿ ಕೆಲಸದವರ ಕೊನೆಗಳಿಗೆಯ ಚಕ್ಕರ್, ಈ ರೀತಿ ನೂರೆಂಟು ಬೇಸರಗಳಲ್ಲಿ ನಾವೆಲ್ಲರೂ ಮನೆಯಲ್ಲಿ ಕೂತು ಮಾತನಾಡುವ ಸಂದರ್ಭಗಳೇ ಕಡಿಮೆಯಾಗಿ, ಮನೆಯಲ್ಲಿ ಗಂಡ ಹೆಂಡಿರ ನಡುವಿನ, ತಂದೆ ತಾಯಿ ಮಕ್ಕಳ ನಡುವೆ ಸಂವಹನವೇ ಕಡಿದು ಬೀಳುತ್ತದೆಯೇ? ಇದರ ಪರಿಣಾಮದಿಂದ ಮನಸ್ಸಿನ ಬೇಸರ, ಕಿರಿಕಿರಿ, ನೋವುಗಳು ಹುಟ್ಟುತ್ತಿದ್ದಂತೆಯೇ ಮಾತಿನ ಮೂಲಕ ಹೊರಬಿದ್ದು ಪರಿಹಾರ ವಾಗದೆಯೇ, ಒಳಗೇ ಉಳಿದು ದಿನದಿಂದ ದಿನಕ್ಕೆ ಶೇಖರವಾಗಿ ದೊಡ್ಡದಾಗಿ, ಕಡ್ಡಿ ಗುಡ್ಡವಾಗಿ ಒಮ್ಮೆ ಜ್ವಾಲಾಮುಖಿಯಂತೆ ಹೊರ ಹಾರುತ್ತಿದೆಯೇ?




✍ **ನಾರಾಯಣ ನವಿಲೇಕರ್**

ಡಾ. ವಿರೂಪಾಕ್ಷ ದೇವರಮನೆ ಬರೆದಿರುವ 'ಸ್ವಲ್ಪ ಮಾತಾಡಿ ಪ್ಲೀಸ್', 'ನೀನಿಲ್ಲದೇ ನನಗೇನಿದೆ' ಮತ್ತು 'ಮಕ್ಕಳತ್ರ ಮಾತಾಡಿ PLEASE' ಎಂಬ ಮೂರು ಪುಸ್ತಕಗಳು ಈ ಎಲ್ಲ ಪ್ರಶ್ನೆಗಳನ್ನೆತ್ತಿಕೊಂಡು ವಿಶ್ಲೇಷಿಸುವ ಪ್ರಯತ್ನ ಮಾಡುತ್ತವೆ.

ತಂದೆ, ತಾಯಿ, ಗಂಡ, ಹೆಂಡತಿ, ಮಕ್ಕಳು, ಇತರ ಮನೆಯವರು, ಈ ಸಂಬಂಧಗಳನ್ನು ದಿನ ದಿನವೂ ನಿಭಾಯಿಸುವುದು ಸುಲಭವಲ್ಲ. ಹೊರ ಜಗತ್ತಿನ ಕಟ್ಟುಪಾಡುಗಳು, ಮನೆಯವರ ಸ್ವಭಾವ ವೈಚಿತ್ರ್ಯಗಳು, ಮನೆಯ ಇತರರಿಂದ ನಿರೀಕ್ಷೆಗಳು, ಸಮಾಜದ ಭಯ, ಸಂಸಾರದ ಜವಾಬ್ದಾರಿಗಳು, ಹೀಗೆ ಅನೇಕ ಆಯಾಮಗಳನ್ನು ನಿಭಾಯಿಸುವಾಗ ಅಸಮಾಧಾನ, ಸಿಟ್ಟು, ಸೆಡವು, ಬೇಸರ, ದುಃಖ, ನಿರಾಶೆ ಸರ್ವೇ ಸಾಮಾನ್ಯ. ಇದರಿಂದ ಮನೆಯಲ್ಲಿ ಬಿಸಿಬಿಸಿ ಮಾತುಗಳು, ವಾಗ್ವಾದಗಳು, ಜಗಳಗಳು ಆಗುವುದೂ ಅಷ್ಟೇ ಸಾಮಾನ್ಯ. ಸಾಧಾರಣವಾಗಿ ಆಯಿತು ಹೋಯಿತು ಎಂದು ಇವೆಲ್ಲ ಆಗಾಗಿ ಮಾತಾಡಿಕೊಂಡೋ, ಕಿರುಚಾಡಿಕೊಂಡೋ ಪರಿಹರಿಸಿಕೊಂಡರೆ ಸಂಸಾರದ ಸಂಬಂಧಗಳು ನೆಟ್ಟಗಿರುತ್ತವೆ. ಆದರೆ ಹಾಗಾಗುವುದಿಲ್ಲ. ಬಹಳಷ್ಟು ಮಾತುಗಳು ಆಡದೇ ಉಳಿದುಬಿಡುತ್ತವೆ. ಮನಸ್ಸಿನಲ್ಲಿ ಅಸಮಾಧಾನ ಕೂತುಬಿಡುತ್ತದೆ. ದಿನಗಳೆದಂತೆ, ಈ ಅಸಮಾಧಾನ ದೊಡ್ಡದಾಗುತ್ತದೆ. ರೆಕ್ಕೆ ಪುಕ್ಕ ಕಟ್ಟಿಕೊಳ್ಳುತ್ತದೆ, ಮಾತು ಕಡಿಮೆಯಾಗುತ್ತದೆ. ಸಂಬಂಧಗಳ ನಡುವೆ ಅದೃಶ್ಯ ಗೋಡೆಗಳೇಳುತ್ತವೆ. ಹೋಗುತ್ತಾ ಹೋಗುತ್ತಾ ಈ ಗೋಡೆಗಳು ದಪ್ಪವಾಗುತ್ತವೆ. ಒಟ್ಟಿಗೆ ಬದುಕುವುದು ಅಸಹನೀಯವಾಗುತ್ತದೆ. ಸಂಬಂಧಗಳ ಕೊಂಡಿ ಕಳಚುವ ಮುನ್ನ 'ಸ್ವಲ್ಪ ಮಾತಾಡಿ ಪ್ಲೀಸ್' ಎಂಬ ಸಲಹೆ ನೀಡುತ್ತದೆ. ಸ್ವತಃ ಮನೋವೈದ್ಯರಾಗಿರುವ ಲೇಖಕರು ತಮ್ಮ ಅನುಭವಕ್ಕೆ ಬಂದ ಅನೇಕ ಪ್ರಕರಣಗಳನ್ನು ಒಂದೊಂದಾಗಿ ಚರ್ಚಿಸುತ್ತಾರೆ.

ಹಿರಿಯರು ಜಾತಕ ನೋಡಿ, ಅಳೆದು ಸುರಿದು ಮಾಡಿದ ಮದುವೆ, ಪರಸ್ಪರ ಮೆಚ್ಚಿಕೊಂಡು ಮಾಡಿಕೊಂಡ ಮದುವೆ ಇತ್ಯಾದಿ ಯಾವುದೇ ಆಗಿರಲಿ, ಮದುವೆಯ ಹೊಸತನದ ಬಿಸಿ ಕಾಲಕ್ರಮೇಣ ಆರಿದಂತೆ, ಬದುಕು ದಿನದಿನದ ಯಾತ್ರಿಕತೆಗೆ ಮರಳುತ್ತದೆ. ಅಷ್ಟೇ ಅಲ್ಲ, ವಿಭಿನ್ನ ಸ್ವಭಾವಗಳ, ವಿಭಿನ್ನ ವ್ಯಕ್ತಿತ್ವಗಳ, ಭಿನ್ನವಾಗಿ ಯೋಚಿಸುವ ಇಬ್ಬರು ವ್ಯಕ್ತಿಗಳು ಒಂದೇ ಸೂರಿನಡಿಯಲ್ಲಿ ಬದುಕುತ್ತಿರುವಾಗ ಘರ್ಷಣೆ, ಅಸಮಾಧಾನ ಅನಿವಾರ್ಯ. ಹಿಂದಿನ ಕಾಲದಲ್ಲಿ ಇಬ್ಬರಲ್ಲಿ ಒಬ್ಬರು, ಸಾಧಾರಣವಾಗಿ ಹೆಂಡತಿ ಅನುಸರಿಸಿಕೊಂಡು ಹೋಗಿ, ತನ್ನ ಸ್ವಂತದ ಇಷ್ಟಗಳನ್ನು ಬದಿಗಿಟ್ಟು, ಗಂಡನ ಮಾತು ಕೇಳುವುದು ಸಾಮಾನ್ಯವಾಗಿತ್ತು. ಕೆಲವು ಸಂದರ್ಭದಲ್ಲಿ, ಗಂಡಸರು ಸಂಪೂರ್ಣ ಹೆಂಡತಿಯ ಮಾತುಗಳನ್ನು ಕೇಳುವವರಾಗಿದ್ದು, 'ಅಮ್ಮಾವ್ರ ಗಂಡ', ಅನ್ನಿಸಿಕೊಳ್ಳುತ್ತಿದ್ದರು. ಹೇಗೇಯೇ ಇರಲಿ, ಇದರಿಂದ ಆ ದಾಂಪತ್ಯ ನಿಲ್ಲುತ್ತಿತ್ತು. ಈಗ ಗಂಡ, ಹೆಂಡತಿ ಇಬ್ಬರೂ ಓದಿದವರಾಗಿದ್ದು, ಹೊರಗೆ ಕೆಲಸ ಮಾಡುತ್ತಿದ್ದು, ತಮ್ಮದೇ ಕನಸುಗಳನ್ನು ಕಟ್ಟಿದ್ದು, ಈ ರೀತಿಯ ಹೊಂದಾಣಿಕೆ ಮಾಡಿಕೊಳ್ಳುವ ಪ್ರವೃತ್ತಿ ಕಡಿಮೆಯಾಗುತ್ತಿದೆಯೇ? ಎರಡನೆಯ ಪುಸ್ತಕ 'ನೀನಿಲ್ಲದೇ ನನಗೇನಿದೆ", ಗಂಡ ಹೆಂಡಿರ ನಡುವೆ ಸಂಬಂಧಗಳು ಹಳಸುವ ಪ್ರಕರಣಗಳನ್ನು ಕೈಗೆತ್ತಿಕೊಳ್ಳುತ್ತದೆ.

ಹಿಂದೆ ಅವಿಭಕ್ತ ಕುಟುಂಬಗಳಲ್ಲಿ ಮಕ್ಕಳಿಗೆ ಲಾಲನೆ ಪಾಲನೆಯ ಜೊತೆಗೆ, ಹಿರಿಯರ ಧಾರಾಳ ಪ್ರೀತಿ, ಲಕ್ಷ್ಯ ದೊರೆಯುತ್ತಿತ್ತು. ಮಕ್ಕಳು ಬೌದ್ಧಿಕವಾಗಿ ಅಷ್ಟೇ ಅಲಲ್ದೇ, ಭಾವನಾತ್ಮಕವಾಗಿ ಕೂಡಾ ಬೆಳೆಯುತ್ತಿದ್ದರು. ಅಂಥಾ ಸನ್ನಿವೇಶಗಳಲ್ಲಿಯೂ ಕೆಲವು ಮಕ್ಕಳು, ಖಿನ್ನರಾಗಿರುವ, ವಿಚಿತ್ರವಾಗಿ ಆಡುವ ಬಗ್ಗೆ ಬಹಳ ಹಿಂದೆ ತ್ರಿವೇಣೀಯವರು 'ಸಮಸ್ಯೆಯ ಮಗು' ಎಂಬ ಪುಸ್ತಕ ಬರೆದದ್ದುಂಟು.

ಈಗ ಗಂಡ, ಹೆಂಡತಿ, ಮಗು ಇವರಷ್ಟೇ ಕುಟುಂಬ. ಇದರಲ್ಲಿಯೂ ಗಂಡ ಹೆಂಡತಿ ಇಬ್ಬರೂ ಹೊರಗೆ ಕೆಲಸ ಮಾಡುವವರು. ಹಿಂದಿನಂತೆ ಮನೆಯ ತುಂಬಾ ಮಕ್ಕಳಿಲ್ಲ. ಒಂದೇ ಅಥವಾ ಅಬ್ಬಬ್ಬಾ ಅಂದರೆ ಎರಡು ಮಕ್ಕಳು. ನಾವು ಸಾಧಿಸಬೇಕು ಅಂದುಕೊಂಡು ಆಗದಿದ್ದನ್ನು, ನಮ್ಮ ಮಕ್ಕಳ ಮೂಲಕ ಸಾಧಿಸಬೇಕು ಅನ್ನುವ ಆಸೆ. ನನ್ನ ಮಗ/ ಮಗಳು ಎಲ್ಲರಿಗಿಂತ, ಎಲ್ಲದರಲ್ಲೂ, ಯಾವಾಗಲೂ, ಮುಂದಿರಬೇಕು ಅನ್ನುವ ಅಸಾಧ್ಯ ನಿರೀಕ್ಷೆ ಈ ಎಲ್ಲದರ ಕಾರಣಗಳಿಂದ ಮಕ್ಕಳ ಬಾಳು ಮಕ್ಕಳಾಟವಾಗಿಲ್ಲ. ಮನೆಯಲ್ಲಿ ಮಗುವಿನೊಂದಿಗೆ ಕೂತು ಮಾತಾಡುವಷ್ಟೂ ನಮಗೆ ಸಮಯವಿಲ್ಲ. ಈ ವಿಷಯವನ್ನು ಕೈಗೆತ್ತಿ ವಿಶ್ಲೇಷಿಸುವ ಮೂರನೆಯ ಪುಸ್ತಕ 'ಮಕ್ಕಳತ್ರ ಮಾತಾಡಿ PLEASE'

ಈ ರೀತಿಯ ಪುಸ್ತಕಗಳು ಇಂಗ್ಲೀಷಿನಲ್ಲಿ ಬಂದಿವೆ. ಆದರೆ ನಮ್ಮ ಬದುಕಿನ ಉದಾಹರಣೆಗಳನ್ನು ಎತ್ತಿಕೊಂಡು, ನಮ್ಮದೇ ಭಾಷೆಯಲ್ಲಿ ನಮಗೆ ಆಪ್ತವಾಗುವಂತೆ ಕನ್ನಡದಲ್ಲಿ ಬರೆದ ಪುಸ್ತಕಗಳೂ ಅಪರೂಪ. ಅದರಲ್ಲಿಯೂ ಆಧುನಿಕ ಜೀವನದ ಒತ್ತಡಗಳು, ಕುಟುಂಬದ ಪ್ರತಿಯೊಬ್ಬರ ಮೇಲೆಯೂ ದಿನದಿನವೂ ಬಿದ್ದು, ಅದನ್ನು ಹೊರಲು ತೊಳಲಾಡುತ್ತಿರುವ ಈಗಿನ ಕಾಲದಲ್ಲಿ ಇಂಥಾ ಪುಸ್ತಕಗಳ ಅಗತ್ಯ ಅತೀ ಹೆಚ್ಚಾಗಿದೆ.

ಮೂರೂ ಪುಸ್ತಕಗಳನ್ನು ಖಂಡಿತಾ ಓದಿ. ಇದರಲ್ಲಿ ಉದಾಹರಿಸುವ ಕೆಲವಾದರೂ ಪ್ರಕರಣಗಳು, 'ಓಹೋ ನಮ್ಮಲ್ಲಿಯೂ ಹೀಗಾಗಿತ್ತು / ಹೀಗಾಗುತ್ತಿದೆ' ಎಂಬ ವಿಚಾರವನ್ನು ನಿಮ್ಮ ಮನಸ್ಸಿನಲ್ಲಿ ತರದಿದ್ದರೆ ಕೇಳಿ.


**ಪುಸ್ತಕ ಪರಿಚಯ:**

- **ಸ್ವಲ್ಪ ಮಾತಾಡಿ ಪ್ಲೀಸ್**
- **ನೀನಿಲ್ಲದೇ ನನಗೇನಿದೆ**
- **ಮಕ್ಕಳತ್ರ ಮಾತಾಡಿ PLEASE**

ಲೇಖಕರು :

**ಡಾ. ವಿರೂಪಾಕ್ಷ ದೇವರಮನೆ**


# ಮೈಸೂರು ಹಾಗೂ ತಂಜಾವೂರು ಚಿತ್ರ ಶೈಲಿ



✍ ಮ. ನಾ. ಪ್ರಸಾದ್

ವಿಜಯನಗರ ಸಾಮ್ರಾಜ್ಯ ಸ್ಥಾಪನೆ 1336 ರಲ್ಲಿ ಆಯಿತು. ಶ್ರೀ ಕೃಷ್ಣದೇವರಾಯನ ಆಳ್ವಿಕೆ (1509–1529) ಯಲ್ಲಿ, ಸಾಮ್ರಾಜ್ಯ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತುತ್ತತುದಿಯನ್ನು ಕಂಡಿತು.

ವಿಜಯನಗರ ಚಕ್ರವರ್ತಿಗಳು ಚಿತ್ರ, ಶಿಲ್ಪ ಹಾಗೂ ವಾಸ್ತುಕಲೆಗಳನ್ನು ಪ್ರೋತ್ಸಾಹಿಸಿದರು. ಅಂತೆಯೇ ಧಾರ್ಮಿಕ – ಆಧ್ಯಾತ್ಮಿಕ ಚರ್ಚೆಗಳಿಗೂ ಪ್ರೋತ್ಸಾಹ ನೀಡಿದರು. ಈ ಬೆಂಬಲದಿಂದಲೇ ಇಡೀ ದಕ್ಷಿಣ ಭಾರತದ ಕಲೆಗಳ ಮೇಲೆ ಈ ಸಾಮ್ರಾಜ್ಯ, ತಾನು ಕೊನೆಗೊಂಡ ನಂತರವೂ ಪ್ರಭಾವ ಬೀರುತ್ತಿತ್ತು. ದೇವಾಲಯಗಳ ಶೈಲಿ ಹಾಗೂ ಕಟ್ಟುವ ವಿಧಾನಗಳಲ್ಲಿ ಮಹತ್ತರವಾದ ಹೊಸ ಹೊಸ ರೀತಿಗಳನ್ನು, ಸಾಮ್ರಾಜ್ಯ ಒದಗಿಸಿತು. ಇದರಲ್ಲೂ, ರಾಜಧಾನಿಯಾದ ಹಂಪೆಯಲ್ಲಿ ಈ ಶೈಲಿಯ ಮಾದರಿಗಳನ್ನು ನಾವು ಕಾಣಬಹುದು.



ವಿಜಯನಗರ ಆಳ್ವಿಕೆ, ದೇವಾಲಯಗಳ ಗೋಡೆಗಳ ಹಾಗೂ ಒಳನೆತ್ತಿಗಳಲ್ಲಿ, ಪೌರಾಣಿಕ ಕಥೆಗಳ ಹೆಸರು ವಾಸಿಯಾಗಿತ್ತು. ಈ ಚಿತ್ರಶೈಲಿ, ವಿಜಯನಗರದ ಶೈಲಿ ಎಂದೇ ಹೆಸರಾಯಿತು. ಹೀಗೆ ಮೊದಲಾದ ಈ ಶೈಲಿ ಕ್ರಮೇಣ ದಕ್ಷಿಣ ಭಾರತದ ಅನೇಕ ಚಿತ್ರ ಶೈಲಿಗಳಿಗೆ ಬೇರಾಯಿತು; ಉದಾಹರಣೆಗೆ, ಮೈಸೂರು ಮತ್ತು ತಂಜಾವೂರು ಶೈಲಿಗಳು, ತಮ್ಮ ನೆಲೆಯ ಕಲೆಗಳ ವಾಡಿಕೆಗಳನ್ನು ವಿಜಯನಗರ ಶೈಲಿಯೊಡನೆ ಸೇರಿಸಿಕೊಂಡು, ವಿಶಿಷ್ಟವಾದವು. ವಿಜಯನಗರದ ಪತನದ ನಂತರ ಈ ಕಲಾಕಾರರು ಮೈಸೂರು, ತಂಜಾವೂರು ಸುರಪುರಗಳಲ್ಲಿ ನೆಲಸಿ, ರಾಜಾಶ್ರಯ ಪಡೆದರು.

ಮೈಸೂರು ಶೈಲಿಯ ವೈಶಿಷ್ಟ್ಯ: ಮೈಸೂರು ಶೈಲಿಯ ಚಿತ್ರಗಳು, ತಂಪಾದ ಬಣ್ಣಗಳು, ನಾಣ್ಮೆ ಹಾಗೂ ಕೂಲಂಕುಶ ಕುಶಲತೆಗಳಿಗೆ ಹೆಸರಾಗಿವೆ. ದೇವ ದೇವಿಯರ ಚಿತ್ರಗಳು ಪುರಾಣಗಳಿಂದ ಎರವಲು ಪಡೆದು, ತಮ್ಮ ನಾಣ್ಮೆಯಾದ ರೇಖಾಶೈಲಿ, ಸೂಕ್ಷ್ಮ ಕುಂಚಟಿಗೆಯ ಕೆಲಸದಿಂದ, ಪ್ರತಿ ಮೂರ್ತಿಯನ್ನು ನಿಚ್ಚಳವಾಗಿ ಮೂಡಿಸುವ, ಹಾಗೂ ಗಿಡ–ಮೂಲಿಕೆಗಳಿಂದ ಅಣಿ ಮಾಡಿದ ಬಣ್ಣಗಳಲ್ಲದೆ, ಬಂಗಾರದ ಎಲೆಗಳ ನಾಜೂಕಾದ ಕೆಲಸಗಳನ್ನು ನಾವು ಈ ಶೈಲಿಯಲ್ಲಿ ಕಾಣಬಹುದು. ಕೆಲಸದ ನಾಣ್ಮೆಗಿಂತ, ನೋಡುಗರಲ್ಲಿ ನಮ್ರ–ಭಾವ ಉಂಟು ಮಾಡುವುದೇ ಈ ಶೈಲಿಯ ಹೆಗ್ಗುರುತಾಗಿದೆ. ಬೇರೆ ಬೇರೆ ಭಾವನೆಗಳನ್ನು ಮೂಡಿಸುವ ಜಾಣ್ಮೆ ಈ ಚಿತ್ರಕಾರರಾಗಿದೆ. ಮೈಸೂರು ಅರಸರ ಆಶ್ರಯದಲ್ಲಿ ಬೆಳೆದ ಈ ಶೈಲಿ, ಕ್ರಮೇಣ ತನ್ನದೇ ವೈಶಿಷ್ಟ್ಯವನ್ನು ಹೊಂದಿತು.



ವಾಡಿಕೆಯಲ್ಲಿ, ಚಿತ್ರಕಾರರು ತಾವೇ ತಮ್ಮ ಚಿತ್ರ ಸಾಮಗ್ರಿಗಳನ್ನು ಅಣಿ ಮಾಡಿಕೊಳ್ಳುತ್ತಿದ್ದರು. ಗಿಡಮೂಲಿಕೆ, ಮಣ್ಣು, ಖನಿಜ, ಕಲ್ಲುಗಳು ಹಾಗೂ ಹೂವುಗಳು, ಈ ಬಣ್ಣಗಳಿಗೆ ಮೂಲ ಸಾಮಗ್ರಿಗಳು. ಒಂದು ವಿಶಿಷ್ಠ ಜಾತಿಯ ಹುಲ್ಲಿನ ಗರಿಕೆಗಳಿಂದ ತಮ್ಮ ಕುಂಚ್‌ಗಳನ್ನು ಅಣಿ ಮಾಡಿಕೊಳ್ಳುತ್ತಿದ್ದರು. ಈ ಖನಿಜ ಹಾಗೂ ಗಿಡಮೂಲಿಕೆಗಳಿಂದ ಅಣಿ ಮಾಡಿದ ಈ ಬಣ್ಣಗಳು ಇಂದಿಗೂ ತಮ್ಮ ಹೊಳಪನ್ನು ಕಳೆದುಕೊಳ್ಳದೆ ಹೊಚ್ಚ ಹೊಸತಾಗಿ ಕಾಣುತ್ತವೆ.

**ಮೈಸೂರು ಬಣ್ಣಚಿತ್ರಗಳನ್ನು ಮಾಡುವುದು ಎಂತು:** ಹಿಂಬದಿಯ ಹಾಳೆಯನ್ನು ಅಣಿ ಮಾಡುವ ಬಗೆ: ಇದಕಾಗಿ ಸಾಮಾನ್ಯವಾಗಿ ಕಾಗದ, ಮರ, ಬಟ್ಟೆಇಲ್ಲವೇ ಗೋಡೆಗಳನ್ನು ಬಳಸಲಾಗುತ್ತದೆ. ಕಾಗದವಾದರೆ, ಕಾಗದ ಹಿಟ್ಟು, ಇಲ್ಲವೇ ಹಳೆಯ ಕಾಗದಗಳನ್ನು ಅರೆದು ತಟ್ಟಿದ, ರಟ್ಟನ್ನು ಮೊದಲು ಮಾಡಿ ಅದನ್ನು ಬಿಸಿಲಲ್ಲಿ ಒಣಗಿಸುತ್ತಾರೆ. ಆಮೇಳೆ, ಅದನ್ನುಒಂದು ಸ್ಫಟಿಕದ ಕಲ್ಲಿನಿಂದತಿಕ್ಕಿ ನಯ ಮಾಡಲಾಗುತ್ತದೆ. ಬಟ್ಟೆ ಬಳಸಿದರೆ ಅದನ್ನು ಮೊದಲು ಒಂದು ಮರದ ಹಲಗೆಗೆ ಬಿಳಿ ಸೀಸ ಮತ್ತು ಗೋಂದು–ಗಂಜಿಯಿಂದ ಅಂಟಿಸಿ, ಒಣಗಿಸಿ ಮತ್ತೆ ಸಮ ಮಾಡಲಾಗುತ್ತದೆ ಮರವಾದರೆ ಅದರ ಮೇಲು ಭಾಗವನ್ನು ಬಿಳಿ ಸೀಸ ಗೋಪಿ ಮಣ್ಣು ಮತ್ತು ಗೋಂದು, ಗೋಡೆಯಾದರೆ ಗೋಪಿ ಮಣ್ಣು, ಸುಣ್ಣ ಹಾಗೂ ಗೋಂದನ್ನು ಹಾಕಿ ಅಣಿ ಮಾಡಲಾಗುತ್ತದೆ ಹೀಗೆ ಅಣಿ ಮಾಡಿದ ಹಿಂಬದಿಯ ವಸ್ತುವಿನ ಮೇಲೆ, ಒಂದು ಸ್ಥೂಲವಾದ ಮೂಡಿಸಬೇಕಾದ ಚಿತ್ರದ ನಕ್ಷೆಯನ್ನುಬರೆದುಕೊಳ್ಳುತ್ತಾರೆ. ಆಮೇಲೆ, ಮೊದಲು ಹಿನ್ನೆಲೆಯನು ್ನತುಂಬಿ, ಮುಂದೆ ಪರಾಣಿಗಳು, ಮನುಷ್ಯರ ಚಿತ್ರಗಳನ್ನು ಮೂಡಿಸುತ್ತಾರೆ. ಇವುಗಳನ್ನು ಬಣ್ಣದಿಂದ ತುಂಬಿದ ಮೇಲೆ, ಚಿತ್ರದ ಸೂಕ್ಷ್ಮಗಳನ್ನು, ಅಂದರೆ ಮುಖಭಾವ, ಉಡುಪು –ತೊಡಪುಗಳನ್ನು ಚಿತ್ರಿಸಿ, ಕಡೆಗೆ ಜೆಸ್ಸೋ ಕೆಲಸವನ್ನು ಮಾಡುತ್ತಾರೆ. ಜೆಸ್ಸೋ ಕೆಲಸವೇ ಮೈಸೂರು ಚಿತ್ರಗಳ ಚೊಕ್ಕ ಮುದ್ರೆ ಅಥವಾ ವೈಶಿಷ್ಟ್ಯ. ಜೆಸ್ಸೋ ಎಂದರೆ, ಚಿತ್ರಗಳ ಮೇಲೆ ಚಿತ್ರದ ಮೇಲೆ ಉಬ್ಬಿನ ಎರಕ ಮಾಡಿ ಅದರ ಮೇಲೆ ಬಂಗಾರದ ತೆಳು ಹಾಳೆಗಳನ್ನು ಅಂಟಿಸುತ್ತಾರೆ.ಮೈಸೂರಿನ ಶೈಲಿಯಲ್ಲಿ ಈ ಜೆಸ್ಸೋ ಕೆಲಸ ಅತಿ ಸೂಕ್ಷ್ಮವಾಗಿಯೂ, ನಾಜೂಕಾಗಿಯೂ ಇರುತ್ತದೆ. ಉಡುಪುಗಳ, ಒಡೆವೆಗಳ, ಕಂಬಗಳ ಮೇಲಿನ ವಾಸ್ತು ಶಿಲ್ಪಗಳ ಸೂಕ್ಷ್ಮತೆಯನ್ನು, ಹಾಗೂ ದೇವ ದೇವಿಯರ ಸುತ್ತ ಇರುವ ವಸ್ತುಗಳನು ಎತ್ತಿ ತೋರುವ ಕೆಲ್ಸ ಈ ಜೆಸ್ಸೋ ಕೆಲಸದ್ದು. ಜೆಸ್ಸೋ ಕೆಲಸವನ್ನು ಬೆಳಿಗ್ಗೆಯೇ ಮಾಡಲಾಗುತ್ತದೆ. ಏಕೆಂದರೆ, ಅದು ಇನ್ನೂ ಹಸಿಯಾಗಿರುವಾಗಲೇ ಮಾಡಿದರೆ, ಅದು ಅದರ ಮೇಲೆ ಬಂಗಾರದ ಹಾಳೆಯನ್ನು ಒತ್ತಿದಾಗ, ಅದು ಗಟ್ಟಿಯಾಗಿ ಹಿಡಿದುಕೊಳ್ಳುತ್ತದೆ.

ಚೆನ್ನಾಗಿ ಒಣಗಿದ ಮೇಲೆ, ಅದರ ಎಲೆ, ಒಂದು ತೆಳು ಕಾಗದವನ್ನು ಹೊದಿಸಿ ಅದರ ಮೇಲೆ ನಯವಾಗಿ ಒಂದು ನುಣುಪಾದ ಕಲ್ಲಿನಿಂದ ಉಜ್ಜಿ, ಚಿತ್ರಗಳಿಗೆ ಹೊಳಪು ನೀಡಲಾಗುತ್ತದೆ. ಮೇಲಿನ ಕಾಗದವನ್ನು ತೆಗೆದಾಗ ಚಿತ್ರ ತನ್ನ ಬೆಳಗುವ ಬಣ್ಣಗಳು, ಮತ್ತು ಬಂಗಾರದ ಕಾಮಗಾರಿಯಿಂದ ಹೊಳೆಯುತ್ತದೆ. ಮೈಸೂರಿನ ಎಲ್ಲ ಅರಸರೂ ಈ ಚಿತ್ರ ಶೈಲಿಗೆ ತಮ್ಮ ಆಶ್ರಯ ನೀಡಿದ್ದಾದರೂ, ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ಆಳ್ವಿಕೆಯಲ್ಲಿ

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month



(1798–1869) ಇದಕ್ಕೆ ಹೆಚ್ಚಿನ ಕುಮ್ಮಕ್ಕು ಒದಗಿತು. ಅವರ ಮಹಾಪ್ರಬಂಧ "ಶ್ರೀತತ್ವನಿಧಿ" 1500 ಪುಟವುಳ್ಳದ್ದಾಗಿ, ಚಿತ್ರಕಾರರಿಗೆ ಮೈಸೂರು ಶೈಲಿಯಲ್ಲಿ, ದೇವ–ದೇವಿರ, ಹಾಗೂ ಪೌರಾಣಿಕ ಮೂರ್ತಿಗಳ ವಿನ್ಯಾಸಗಳು ಅಲ್ಲದೆ, ಯಾವುದನ್ನು ಹೇಗೆ ತೋರಬೇಕೆಂಬುದರ ಮೇಲೆ ವಿಷದವಾಗಿ, ಅವುಗಳನ್ನು ತೋರುವ ಸೂಕ್ತ ಬಗೆ, ಬಳಸಬೇಕಾದ ಬಣ್ಣಗಳು, ಭಾವಗಳು, ಹಿನ್ನೆಲೆಯಲ್ಲಿ ತೋರಬೇಕಾದ ಋತು, ಮೃಗ – ಮರಗಿಡಗಳು, ಅವು ಎಂತಿರಬೇಕು, ಯಾವ ಠಾವಿನಲ್ಲಿ ಅವುಗಳನ್ನು ತೋರಬೇಕು, ಎನ್ನುವ ಎಲ್ಲದರ ಬಗ್ಗೆಯೂ ವಿಶದವಾಗಿ ಶಿಕ್ಷಣ ನೀಡುತ್ತದೆ. ಇದು ಮೈಸೂರು ಚಿತ್ರಶೈಲಿಯ ಬಗ್ಗೆ ಒಂದು ಮಹಾ ಆಕರ ಗ್ರಂಥ.

ಈ ಕಲೆಯ ಬಗ್ಗೆ ಇತರ ಪುರಾತನ ಗ್ರಂಥಗಳು, ವಿಷ್ಣು ಧರ್ಮೋತ್ತರ ಪುರಾಣ, ಅಭಿಲಷಿತಾರ್ಥ ಚಿಂತಾಮಣಿ, ಮತ್ತು ಶಿವತತ್ವ ರತ್ನಾಕರ ಇವೆಲ್ಲವೂ ಈ ಕಲೆಯಗುರಿ, ವಿಧಾನ ಬಣ್ಣ, ಕುಂಚ ಮತ್ತು ಹಿಂಬದಿಯ ಅಣಿಗಳು, ಮತ್ತು ಚಿತ್ರಕಾರನ ಯೋಗ್ಯತೆ, ಬಳಸಬೇಕಾದ ತಂತ್ರ, ಎಲ್ಲದರ ಬಗ್ಗೆ ಮಾಹಿತಿಗಳನ್ನು ನೀಡುತ್ತವೆ.

**ತಂಜಾವೂರು ಚಿತ್ರಶೈಲಿ:** ಈ ಶೈಲಿ ತಂಜಾವೂರು ಪಟ್ಟಣದಲ್ಲಿ ಹುಟ್ಟಿ ಅಮೇಲೆ ತಮಿಳುನಾಡಿನ ಸುತ್ತಮುತ್ತ ಸ್ಥಳಗಳಿಗೆ ಹರಡಿತು. ಮೈಸೂರು ಶೈಲಿಯಂತೆಯೇ ಈ ಶೈಲಿ ಕಲೆಗಳ ಹರಡಿತು. ಮೈಸೂರು ಶೈಲಿಯಂತೆಯೇ



ಈ ಶೈಲಿ ಕಲೆಗಳ ಪೋಷಕರಾದ ತಂಜಾವೂರಿನ ಮರಾಠ ಹಾಗೂ ನಾಯಕರ ಆಶ್ರಯದಲ್ಲಿ ಬೆಳೆಯಿತು. ತಂಜಾವೂರು ಚಿತ್ರಗಳು ಸರಳವಾದ ಮೂರ್ತಿ ನಿರೂಪಣೆ, ಬೆರಗಿನ ಬಣ್ಣಗಳು ಮತ್ತು ಹೆಚ್ಚು ಜೆಸ್ಸೋ ಕೆಲಸ, ಬಂಗಾರದ ಅಲೆಗಳಷ್ಟೇ ಅಕ್ಕದೆಗಾಜಿನ ಮಣಿಗಳು, ಕೆಲವು ಸಲ ಬೆಲೆಬಾಳುವ ಮುತ್ತು ಮಾಣಿಕ್ಯಗಳನ್ನೂ ಹದ್ದಿರುವುದಾಗಿರುತ್ತದೆ. ದೇವ ದೇವಿಯವರು, ಯತಿಗಳು ಮೂಡಿಸುವ ಈ ಚಿತ್ರಗಳ ಆಧಾರ, ಪೌರಾಣಿಕ, ಸ್ಥಳಪುರಾಣ ಮತ್ತಿತರ ಧರ್ಮ ಗ್ರಂಥಗಳನ್ನು ಅವಲಂಬಿಸಿರುತ್ತದೆ. ಈ ಚಿತ್ರಗಳನ್ನು ತಮಿಳಿನಲ್ಲಿ "ಪಲಗೈಪದಮಿನ್" ಎಂದು ಕರೆಯುತ್ತಾರೆ. ಏಕೆಂದರೆ ಇವುಗಳು ಹಲಗೆಯ ಮೇಲೆ ಮೂಡಿಸುವುದರಿಂದ ಮೊದಲು ತಂಜಾವೂರಿನ ದೊರೆಗಳಾದ ನಾಯಕರಿಂದ ಆಮೇಲೆ ಮರಾಠಾ ದೊರೆಗಳಿಂದ ಪೋಷಿತ ವಾಯಿತು. ಮರಾಠ ದೊರೆಗಳಾದ ಏಕೋಜಿ, ತುಳಜಾಜಿ, ಎರಡನೆಯ ಸರ್ಫೋಜಿ ಅವರುಗಳು ಹೆಚ್ಚಿನ ಬೆಳವಣಿಗೆಗೆ ಕಾರಣ ರಾದರು. ಎರಡನೆಯ ಸರ್ಫೋಜಿಯ ಕಾಲದಲ್ಲಿ ಹೆಚ್ಚಿನ ಕಾಲ ಕೌಶಲ್ಯ ಬೆಳೆಯಿತು. ಮರಾಠರ ಅವನತಿಯ ನಂತರ ಅಲ್ಲಿಯ ವ್ಯಾಪಾರಸ್ಥ ಚೆಟ್ಟಿಯಾರ್ ಕುಲದವರು, ಈ ಕಳೆಯ ಬೆಳೆವಣಿಗೆಗೆ ಕಾರಣರಾದರು. ಚೆಟ್ಟಿಯಾರರ ಆಶ್ರಯದಲ್ಲಿ ಶೈವ ರೂಪಕಗಳೂ ಈ ಚಿತ್ರಕಲೆಯಲ್ಲಿ ಮೂಡಿ ಬಂದವು. ತಂಜಾವೂರು ಚಿತ್ರಗಳು ಸಾಮಾನ್ಯವಾಗಿ ದಪ್ಪ ನೇಯ್ದ ಬಟ್ಟೆಯನ್ನು ಹಲಗೆಯ ಮೇಲೆ ಅರಬ್ಬೀ ಗೋಂದಿನಿಂದ ಅಂಟಿಸಿ, ಮೂಡಿಸಲಾಗುತ್ತಿದ್ದವು. ದಪ್ಪ ಬಟ್ಟೆಯನ್ನು ಅಂತೂ ಸೇರಿಸಿದ ಗೋಪಿ ಮಣ್ಣು ಇಲ್ಲವೇ ಸುಣ್ಣದಿಂದ ಬಳಿದು, ಒಣಗಿಸಲಾಗುತ್ತಿತ್ತು. ಬಟ್ಟೆ ಅಷ್ಟೇ ಅಲ್ಲದೆ, ಹಲಗೆಯ ಮೇಲೆ, ಗೋಡೆಗಳು, ದಂತ ಕಾಗೆ ಬಂಗಾರದ ಮೇಲೂ ಮೂಡಿಸಲಾಗುತ್ತಿತ್ತು. ಚಿಕ್ಕ ದಂತದ ತುಂಡಿನ ಮೇಲೆ ಮೂಡಿಸಿದ ಚಿತ್ರಗಳನ್ನು ಪಾದಕವಾಗಿ ಕೂಡ ಹಾಕಿಕೊಳ್ಳುತ್ತಿದ್ದರು ಇವುಗಳಿಗೆ "ರಾಜಹಾರಮ್" ಎಂದು ಕರಿಯುತ್ತಿದ್ದರು.

ಹಳೆಯ ಚಿತ್ರಗಳಲ್ಲಿ ಹೊರಗೆರೆಗಳು ಕಂಡು ಅಥವಾ ಕೆಂಪು ಬಣ್ಣಗಳಲ್ಲಿರುತ್ತಿದ್ದವು. ಹೆಚ್ಚಾಗಿ ಹಿನ್ನೆಲೆ ಕೆಂಪು ಬಣ್ಣದ್ದಾಗಿದ್ದರೂ ಕೂಡ, ನೀಲಿ ಹಾಗೂ ಹಸಿರು ಬಣ್ಣಗಳ ಹಿನ್ನೆಲೆಯನ್ನೂ ನಾವೂ ಕಾಣಬಹುದು. ಸಾಮಾನ್ಯವಾಗಿ ಪ್ರಸ ವಿಷ್ಣುಮೂರ್ತಿ, ಇನ್ನಿತರ ಮೂರ್ತಿಗಳಿಂತ ಬೃಹದಾಕಾರವಾಗಿ, ನಟ್ಟ ನಡುವಿನಲ್ಲಿ ಮೂಡಿಬರುತ್ತದೆ. ಮೂರ್ತಿಗಳೆಲ್ಲ ಬೆರಗು ಬಣ್ಣಗಳಲ್ಲಿದ್ದರೂ, ಕೇವಲ ಮುಖದ ಮೇಲೆ ನೆರಳುಗೆರೆಗಳು ನಿಜರೂಪವನ್ನು ಮೂಡಿಸುವುದಕ್ಕಾಗಿ ಕಾಣುತ್ತವೆ. ತಂಜಾವೂರು ಶೈಲಿಯಲ್ಲಿ ಜೆಸ್ಸೋ ಕೆಲಸದಲ್ಲಿ, ಹೆಚ್ಚು ಉಬ್ಬು ಕಾಣುತ್ತದೆ. ಹಾಗೆಯೇ ಮೈಸೂರು ಶೈಲಿಗಿಂತ, ಹೆಚ್ಚು ದಪ್ಪ ಬಂಗಾರದ ಎಳೆಗಳ ಕೆಲಸ ಕಾಣುತ್ತದೆ.




**ಮೈಸೂರಿನಲ್ಲಿ ಇತ್ತೀಚೆಗೆ ನಡೆದ 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಡಾ. ಬಿ. ಆರ್. ಮಂಜುನಾಥ ಅವರಿಗೆ ಕೊಡ ಮಾಡಿದ ಪ್ರಶಸ್ತಿ ಫಲಕ**

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647, 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938